
ನವಸಾಕ್ಷರ ಪುಸ್ತಕ ಮಾಲೆ ೭೨

ರಂಗೋಲಿ

ಶಾಂತಿನಾಯಕ



ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ನವಸಾಕ್ಷರ ಪುಸ್ತಕ ಮಾಲೆ

ಲೋಕಶಿಕ್ಷಣ ನಿರ್ದೇಶನಾಲಯ
ನವಸಾಕ್ಷರ ಪುಸ್ತಕ ಮಾಲೆ - ೬೨

ರಂಗೋಲಿ

ಶಾಂತಿನಾಯಕ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾನಿಲಯ
ಹಂಪಿ - ೫೮೩ ೨೭೭

RANGOLI : By Shanthi Nayak, Published by The Director of Prasaranga, Kannada University, Hampi - 583 211, Karnataka.
First Impression 1994, Pp. ii + 26, Price : Rs. 8.00

ಸಂಯೋಜನಾಧಿಕಾರಿ
ಎಚ್. ಎಸ್. ಶ್ರೀಮತಿ
ಪಠ್ಯಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮಕಾಳಿ

ಬೆಲೆ : ರೂ. ೮.೦೦

ಮುದ್ರಕರು
ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್
೮/೧, ಮಾರೇನಹಳ್ಳಿ, ೧ನೇ ಕ್ರಾಸ್, ೨೩ನೇ ಮೇನ್,
ಜೆ. ಪಿ. ನಗರ, ಬೆಂಗಳೂರು - ೫೬೦ ೦೭೮.
ಫೋನ್ : ៦೪೨೧೦೨


ರಂಗೋಲಿ

ಬಣ್ಣಬಣ್ಣದ ನೂಲಿನಿಂದ ಬಟ್ಟೆಯ ಮೇಲೆ ಸೂಜಿ ಹೊಲಿಗೆ ಮಾಡಿ ಚಿತ್ರ ರಚಿಸಿದರೆ ಅದನ್ನು ಕಸೂತಿಯೆನ್ನುತ್ತೇವೆ. ಕೊಕ್ಕೆ ಸೂಜಿಯಿಂದ ನೂಲನ್ನು ಹೆಣೆಯುತ್ತ ಚಿತ್ರ ಮೂಡಿಸಿದರೆ ಅದು ಹೆಣಿಗೆಯಾಯಿತು. ಮನುಷ್ಯರ ಹಣೆ, ತೋಳು, ಕೆನ್ನೆ ಮುಂತಾದ ಅಂಗಗಳ ಮೇಲೆ ಕಲಾತ್ಮಕವಾಗಿ ಸೂಜಿಯಿಂದ ಚುಚ್ಚಿ, ಕಾಡಿಗೆ ಹಚ್ಚಿ, ಚಿತ್ರ ಮೂಡಿಸಿದರೆ ಅದನ್ನು ಹಚ್ಚೆ ಎನ್ನುತ್ತೇವೆ. ಬಣ್ಣಬಣ್ಣದ ಮಣ್ಣು, ಹೂ, ಬೀಜಗಳನ್ನು, ನೆಲ, ಗೋಡೆ, ಮಡಕೆ, ಹರಿವಾಣ ಮುಂತಾದವುಗಳ ಮೇಲೆ ಕಲಾತ್ಮಕವಾಗಿ ಇಟ್ಟಾಗ ರಂಗೋಲಿಯಾಯಿತು.

ಮೇಲೆ ಹೇಳಿದ ಕಸೂತಿ, ಹೆಣಿಗೆ, ಹಚ್ಚೆ, ರಂಗೋಲಿ ಇವು ಜನಪದ ಚಿತ್ರಕಲೆಗಳು. ಇವುಗಳನ್ನು ಹಿರಿಯರಿಂದ ಕಿರಿಯರು ನೋಡಿ ಕಲಿತುಕೊಳ್ಳುತ್ತಾರೆ.

ರಂಗೋಲಿಯು ಭಾರತ ದೇಶದ ವಿಶಿಷ್ಟ ಜನಪದ ಕಲೆ. ಲಕ್ಷ ಲಕ್ಷ ಮನೆ, ದೇವಾಲಯ, ಹಾದಿ ಬೀದಿಗಳಲ್ಲಿ ಇದು ನಿತ್ಯವೂ ರಚನೆಗೊಳ್ಳುತ್ತದೆ. ಬಹುಬೇಗನೆ ಅಳಿದೂ ಹೋಗುತ್ತದೆ.

ಕರ್ನಾಟಕ ಕರಾವಳಿಯ ಹಳ್ಳಿಗರು ರಂಗೋಲಿಯನ್ನು ಹಲಿ, ಶೇಡಿ ಬರೆಯುವುದು ಎನ್ನುತ್ತಾರೆ. ದಕ್ಷಿಣ ಕರ್ನಾಟಕದವರು ಹಸೆ, ಚಿತ್ತಾರವೆನ್ನುತ್ತಾರೆ. ಉತ್ತರ ಕರ್ನಾಟಕದಲ್ಲಿ





ಸಾಂಪ್ರದಾಯಿಕ ರಂಗೋಲಿಗಳು

ಕಾಣೆ, ಕಾರಣೆ ಎಂಬ ಹೆಸರು ದೊರೆಯುತ್ತವೆ. ಬಿಜಾಪುರದ ಹಳ್ಳಿಗಳಲ್ಲಿ ಈ ಹೆಸರು ಬಳಕೆಯಲ್ಲಿದೆ. ಕನ್ನಡ ಸಾಹಿತಿಗಳು 'ಕಾರಣೆ' ಎಂಬ ಶಬ್ದವನ್ನು ರಂಗೋಲಿ ಎಂಬ ಅರ್ಥದಲ್ಲಿ ಬಳಸಿದ್ದಾರೆ. ಸಾರಿಸಿದ ನೆಲದ ಬಳಿಯಿರುವ ಕೆಳಗೋಡೆಗೆ ಕೆಂಪು ಬಣ್ಣದಿಂದ ಹಾಕುವ ರಂಗೋಲಿಯೇ ಕಾರಣೆ. ರಂಗೋಲಿಗೆ ಉತ್ತರ ಕರ್ನಾಟಕದಲ್ಲಿ ಉರಮಂಜಿ ಬಳಿಯುವುದು, ಬೆಳದಿಂಗಳು ಬರೆಯುವುದು, ಸುಣ್ಣಬಣ್ಣ ಮಾಡುವದು ಎಂಬ ಹೆಸರುಗಳು ಹೆಚ್ಚು ಬಳಕೆಯಲ್ಲಿವೆ. ಕರ್ನಾಟಕದ ಸುಶಿಕ್ಷಿತರು ರಂಗೋಲಿಯೆಂಬ ಹೆಸರನ್ನು ಬಳಸುತ್ತಿದ್ದಾರೆ.


ಜಾನಪದರು ತಾವು ವಾಸಿಸುವ ಗುಡಿಸಲುಗಳ ಗೋಡೆಯನ್ನೇ ರಂಗೋಲಿಯ ಫಲಕವಾಗಿ ಬಳಸುತ್ತಾರೆ. ಗೋಡೆಯನ್ನು ಫಲಕವಾಗಿ ಬಳಸುವುದರಿಂದ ರಂಗೊಲಿ, ರಚನೆಗೆ ಸಾಕಷ್ಟು ವಿಸ್ತಾರವಾದ ಸ್ಥಳ ದೊರೆಯುತ್ತದೆ. ಅದಲ್ಲದೆ ಗೋಡೆಯ ಮೇಲಿನ ರಂಗೋಲಿಗೆ ಕಾಲು ತುಳಿತದ ಭಯವಿರುವುದಿಲ್ಲ. ಆದ್ದರಿಂದ ಅದು ಹೆಚ್ಚು ಕಾಲ ಬಾಳುತ್ತದೆ. ಮನೆಯ ಅಂಗಳವು ಕೂಡ ರಂಗೋಲಿ ರಚನೆಗೆ ಸಾಕಷ್ಟು ವಿಸ್ತಾರವಾದ ಸ್ಥಳವನ್ನು ಒದಗಿಸುತ್ತದೆ. ಇಲ್ಲಿ ಹೆಚ್ಚು ಬೆಳಕು ಇರುತ್ತದೆ. ಆದ್ದರಿಂದ ಅಂಗಳದ ರಂಗೋಲಿಯು ಎದುರಿಗೆ ಬಂದವರ ಗಮನವನ್ನು ಬೇಗ ತನ್ನತ್ತ ಸೆಳೆಯುತ್ತದೆ. ಹೊಸ್ತಿಲು ಹೆಚ್ಚು ವಿಸ್ತಾರವಾದ ಫಲಕವಲ್ಲ. ಆದರೂ ಅದು ಹೆಚ್ಚು ಮಹತ್ವದ ಫಲಕವಾಗಿದೆ. ಯಾಕೆಂದರೆ ಹೊಸ್ತಿಲನ್ನು ಜಾನಪದರು ದೇವರೆಂದು ತಿಳಿಯುತ್ತಾರೆ. ಆದ್ದರಿಂದ ಹೊಸ್ತಿಲನ್ನು ತುಳಿಯಲು ನಿಷೇಧವಿದೆ.


ಕೆಲವರು ಹೊಸ್ತಿಲಿಗೆ ನಿತ್ಯ ರಂಗೋಲಿಯನ್ನು ಹಾಕುವ ಪರಿಪಾಠವನ್ನು ಹೊಂದಿರುತ್ತಾರೆ. ಪ್ರಧಾನ ಬಾಗಿಲಿನ ಸುತ್ತಣ ಅಂಚು ಹಾಗೂ ಪ್ರಧಾನ ಬಾಗಿಲಿನ ಕದಗಳು ರಂಗೋಲಿಯ ಫಲಕಗಳಾಗಿವೆ. ತುಳಸಿಯ ಮನೆಯ ಮುಂದುಗಡೆ ಹಾಗೂ ದೇವರ ಕೋಣೆಯಲ್ಲಿ ನಿತ್ಯ ರಂಗೋಲಿ ಹಾಕುವ ಪದ್ಧತಿಯಿದೆ. ವಿಶೇಷ ದಿನಗಳಲ್ಲಿ ದಿನಬಳಕೆಯ ವಸ್ತುಗಳಾದ ಬೀಸುವ ಕಲ್ಲು, ಅಕ್ಕಿ ಮಡಕೆ, ಕಣಜ, ಮೊರ, ಒನಕೆ, ಕತ್ತಿ, ಮಣೆ, ಒರಳು, ಒಲೆ, ಅಕ್ಕಿ, ಮೂಡೆ, ನೀರ ಹಂಡೆ, ಸಿದ್ದೆ, ಕೊಳಗ, ಕೋಳುಗಂಬ, ಆರತಿಬಟ್ಟಲುಗಳ ಮೇಲೆ ಸರಳವಾದ ರಂಗೋಲಿಯನ್ನು ರಚಿಸುತ್ತಾರೆ. ಪವಿತ್ರ ಸ್ಥಳಗಳಾದ ಅಶ್ವತ್ಥಕಟ್ಟೆ, ತುಳಸಿಕಟ್ಟೆ, ರಥ ಮತ್ತು ತೇರು ಹಾದುಹೋಗುವ ದಾರಿ ಮುಂತಾದವೂ ರಂಗೋಲಿಗೆ ಫಲಕಗಳಾಗಿವೆ.





ಕಳಸ ನಾಡವರ ಹಸೆಗರದ ಒಂದು ಭಾಗ







ಕೆಲವು ಸಾಂಪ್ರಾದಾಯಿಕ ರಂಗೋಲೆಗಳು

ನವರಾತ್ರಿಯಲ್ಲಿ ಆಧುನಿಕ ಯಂತ್ರ ವಾಹನಗಳಾದ ಲಾರಿ, ಟೆಂಪೊ, ಕಾರುಗಳ ಮೇಲೆ ಕೂಡ ರಂಗೋಲಿಯನ್ನು ರಚಿಸಲಾಗುತ್ತಿದೆ.

ರಂಗೋಲಿಗೆ ಬಳಸುವ ಬಣ್ಣದಲ್ಲಿ ಹುಡಿಬಣ್ಣ, ನೀರುಬಣ್ಣ ಎಂದು ಎರಡು ತೆರ. ರಂಗೋಲಿಗೆ ಬೇಕಾಗುವ ಬಹಳಷ್ಟು ಬಣ್ಣಗಳು ಆಯಾ ಪ್ರದೇಶದಲ್ಲಿ ನೈಸರ್ಗಿಕವಾಗಿ ದೊರೆಯುತ್ತವೆ. ರಂಗೋಲಿ ಹಾಕುವವರು ನೈಸರ್ಗಿಕವಾಗಿ ದೊರೆಯುವ ಬಣ್ಣಗಳನ್ನೇ ನೇರವಾಗಿ ಬಳಸುತ್ತಾರೆ. ಸಮೀಪದಲ್ಲಿ ದೊರೆಯುವ ವಸ್ತುಗಳಿಂದ ಕೆಲವು ಬಣ್ಣಗಳನ್ನು ಮನೆಯಲ್ಲಿ ತಯಾರಿಸಿಕೊಳ್ಳುವುದುಂಟು.

ಬಿಳಿ ಜೇಡಿಮಣ್ಣು ಕರ್ನಾಟಕದ ಕರಾವಳಿಯಲ್ಲಿ ದೊರೆಯುತ್ತದೆ. ಇಲ್ಲಿಯ ಜನರು ಬಿಳಿಬಣ್ಣಕ್ಕಾಗಿ ಇದನ್ನು ಬಳಸುತ್ತಾರೆ. ಇವರು ಜೇಡಿಮಣ್ಣನ್ನು ಶೇಡಿಯೆನ್ನುತ್ತಾರೆ. ಶೇಡಿಯು ಇಲ್ಲಿ ಅಚ್ಚ ಬಿಳಿ, ನಸು ಹಳದಿ, ನಸುಗೆಂಪು ಮುಂತಾದ ಬಣ್ಣಗಳಲ್ಲಿ ದೊರೆಯುತ್ತದೆ. ಬಾವಿಯನ್ನು ಅಗೆದಾಗ ತಳದಲ್ಲಿ ಬಣ್ಣಬಣ್ಣದ ಮರಳು ಮಿಶ್ರಿತ ಮಣ್ಣು ಹಾಗೂ ಬೆಣ್ಣೆಯಂತಹ ಶೇಡಿ ದೊರೆಯುತ್ತದೆ. ಆಸಕ್ತರು ಇದನ್ನು ಒಣಗಿಸಿ ಸಂಗ್ರಹಿಸಿಕೊಳ್ಳುತ್ತಾರೆ. ಮರಳು ಮಿಶ್ರಿತ ಶೇಡಿಯು ಪುಡಿಬಣ್ಣಕ್ಕೆ ಯೋಗ್ಯ. ಮರಳಿಲ್ಲದ ನುಣುಪಾದ ಶೇಡಿಯು ನೀರುಬಣ್ಣಕ್ಕೆ ಯೋಗ್ಯವಾಗಿದೆ. ಇದಕ್ಕೆ ಹದವನ್ನು ತಿಳಿದುಕೊಂಡು ನೀರು ಸೇರಿಸಬೇಕು. ಗೋಡೆಯ ಮೇಲಿನ ರಂಗೋಲಿಗೆ ಬಳಸಲಾಗುವ ನೀರು ಬಣ್ಣವು ನೆಲದ ಮೇಲೆ ಬಳಸಲಾಗುವ ನೀರುಬಣ್ಣಕ್ಕಿಂತ ತುಸು ದಪ್ಪವಾಗಿರಬೇಕು. ಕುಂಚದಿಂದ ಮಿತವಾಗಿ ಬಣ್ಣವನ್ನು ಎತ್ತಿಕೊಳ್ಳಬೇಕು. ತೆಳ್ಳಗಾದರೆ ಬಣ್ಣವು ಗೆರೆಯನ್ನು ಮೀರಿ ಕೆಳಗಿಳಿಯುತ್ತದೆ. ಆಗ ರಂಗೋಲಿಯು ಕೆಡುತ್ತದೆ. ಗೋಡೆಯ ರಂಗೋಲಿಗೆ ಪುಡಿಬಣ್ಣವು ಪ್ರಯೋಜನವಾಗುವುದಿಲ್ಲ. ಇದು ನೆಲದಂತಹ ಸಮತಟ್ಟಾದ ಫಲಕದ ಮೇಲೆ ಮಾತ್ರ ಹೊಂದಿಕೊಳ್ಳುತ್ತದೆ.

ಗುಡ್ಡದ ಬದಿಯ ನೀರುಕ್ಕುವ ಸ್ಥಳದಲ್ಲಿ ಬಿಳಿಶೇಡಿ ಉಕ್ಕುವುದುಂಟು. ಇಂಥ ಸ್ಥಳದ ಬಳಿ ವಾಸವಾಗಿರುವವರು ಶೇಡಿಯನ್ನು ಸಂಗ್ರಹಿಸಿ ಮುದ್ದೆ ಮಾಡಿ ಒಣಗಿಸುತ್ತಾರೆ. ಒಣಗಿದ ಮುದ್ದೆಗಳನ್ನು ಮಾರಾಟ ಮಾಡಿ ಅಲ್ಪಸ್ವಲ್ಪ ಹಣವನ್ನು ಪಡೆಯುತ್ತಾರೆ. ಹಿಂದೆ ತಿರುಪತಿ ತಿಮ್ಮಪ್ಪನ ಭಕ್ತರಾದ ದಾಸಯ್ಯಗಳು ಮನೆ ಮನೆಗೆ ಭಿಕ್ಷಕ್ಕೆ ಬರುವಾಗ ಶೇಡಿಯಕಡಿಗಳನ್ನು

ತಮ್ಮ ಜೊತೆಗೆ ತರುತ್ತಿದ್ದರು. ಬೇಕಾದವರಿಗೆ ಇವುಗಳನ್ನು ಕೊಡುತ್ತಿದ್ದರು. 'ಶೇಡಿಯ ಕಡಿ'ಗಳನ್ನು 'ನಾಮದ ಹೋಳು' ಎನ್ನುತ್ತಾರೆ. ವಿಷ್ಣು ಭಕ್ತರು ತಮ್ಮ ಶರೀರದ ಮೇಲೆ ನಾಮ ಹಚ್ಚಿಕೊಳ್ಳಲು 'ನಾಮದ ಹೋಳು'ಗಳನ್ನು ಬಳಸುತ್ತಾರೆ.

ಉತ್ತರ ಕರ್ನಾಟಕದಲ್ಲಿ ಬಿಳಿಬಣ್ಣಕ್ಕಾಗಿ ಸುಣ್ಣದ ಪುಡಿಯನ್ನು ಬಳಸುತ್ತಾರೆ. ಇವರು ಕೆಂಪುಬಣ್ಣಕ್ಕಾಗಿ ಹೊಲಗಳಲ್ಲಿ ದೊರೆಯುವ ಕೆಂಪು ಮಣ್ಣನ್ನು ಬಳಸುತ್ತಾರೆ. ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿ ಕಬ್ಬಿಣ ಅದಿರಿನ ಗಣಿಗಳಿವೆ. ಇಲ್ಲಿ 'ಉರಮಂಜಿ' ಎಂಬ ಕೆಂಪು ಮಣ್ಣು ದೊರೆಯುತ್ತದೆ. ಗಣಿಗಳ ಬಳಿ ಕಸವಾಗಿ ಬಿದ್ದಿರುವ ಈ ಮಣ್ಣನ್ನು ಮಹಿಳೆಯರು ಚೀಲಗಳಲ್ಲಿ ತುಂಬಿ ಮಾರಾಟಕ್ಕೆ ತರುತ್ತಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಕೆಂಪು ಕಲ್ಲು ಹರಳುಗಳನ್ನು ಬಳಸುತ್ತಾರೆ. ಇವು ಹೊಳೆದಂಡೆ, ಮಳೆಗಾಲದಲ್ಲಿ ನೀರು ಹರಿಯುವ ಸ್ಥಳ ಹಾಗೂ ಕಲ್ಲುಕಣಿಗಳಲ್ಲಿ ದೊರೆಯುತ್ತವೆ. ಹವಳದ ಬಣ್ಣದ ಈ ಹರಳುಗಳನ್ನು ಒಂದು ದಿನ ನೀರಿನಲ್ಲಿ ನೆನೆಯಿಡಬೇಕು. ಮರುದಿನ ನೀರು ಬೆರೆಸಿ ಅರೆಯಬೇಕು. ಈ ರೀತಿಯಾಗಿ ತಯಾರಿಸಿದ ಬಣ್ಣವನ್ನು 'ಜಾಂಜು'ಎನ್ನುತ್ತಾರೆ. ಹಸಿರು ಬಣ್ಣಕ್ಕಾಗಿ ಕುಂಬಳ ಎಲೆಯ ರಸವನ್ನು ಉತ್ತರ ಕನ್ನಡದ ನಾಡವರು ಬಳಸುತ್ತಿದ್ದರು. ಆದರೆ ಈಗ ಈ ಬಣ್ಣ ತಯಾರಿಸುವ ಕ್ರಮವು ಇವರಿಗೆ ಮರೆತು ಹೋಗಿದೆ. ತುಮಕೂರು, ಚಿತ್ರದುರ್ಗದ ಕಾಡುಗೊಲ್ಲರು ತೊಂಡೆಸೊಪ್ಪನ್ನು ಹಿಂಡಿ ಹಸಿರು ಬಣ್ಣವನ್ನು ತಯಾರಿಸುತ್ತಾರೆ.

ಶಿವಮೊಗ್ಗಾ ಜಿಲ್ಲೆಯ ದೀವರು, ಕಾಡಿನಲ್ಲಿ ದೊರೆಯುವ ಗುರಗೆಕಾಯಿಗಳನ್ನು ನೀರಿನಲ್ಲಿ ಬೇಯಿಸಿ ಹಳದಿ ಬಣ್ಣವನ್ನು ಸಿದ್ಧಪಡಿಸಿಕೊಳ್ಳುತ್ತಾರೆ. ಈ ಬಣ್ಣಕ್ಕೆ ಉತ್ತಮ ಹೊಳಪು ಇದ್ದು, ಉಪಯೋಗಿಸಿದ ಮೇಲೆ ಕೈಗಾಗಲೀ ಮೈಗಾಗಲೀ ಅಂಟಿಕೊಳ್ಳುವದಿಲ್ಲ. ವರ್ಷಗಟ್ಟಲೆ ಬಾಳುತ್ತದೆ. ಕಪ್ಪುಬಣ್ಣಕ್ಕಾಗಿ ಇವರು ಅಕ್ಕಿಯನ್ನು ಹುರಿದು ಮಸಿ ಮಾಡುತ್ತಾರೆ. ಅಕ್ಕಿಯ ಮಸಿಯನ್ನು ಹಿಟ್ಟು ಮಾಡಿ ಸಾಕಷ್ಟು ನೀರು ಹಾಕಿ ಕುದಿಸುತ್ತಾರೆ. ಮಸಿಯ ಜೊತೆ ಕಾಡುಗೇರುಕಾಯಿ, ನೇರಲ ಮರದ ಚಕ್ಕೆಯನ್ನು ಕುಟ್ಟಿ ಪುಡಿ ಮಾಡಿ ಸೇರಿಸುತ್ತಾರೆ. ಈ ಮಿಶ್ರಣವು ಕುದಿದು ದ್ರಾವಣವಾದಾಗ ಅದನ್ನು ರಂಗೋಲಿಗೆ ಬಣ್ಣವಾಗಿ ಬಳಸುತ್ತಾರೆ. ಇದು ಕೂಡ ಮೈಗೆ ಕೈಗೆ ಅಂಟಿಕೊಳ್ಳುವುದಿಲ್ಲ. ರಂಗೋಲಿಗೆ ಹೊಳಪನ್ನೂ ಬಾಳಿಕೆಯನ್ನೂ ಕೊಡುತ್ತದೆ. ಕೆಮ್ಮಣ್ಣು ಹಾಗೂ ಅಕ್ಕಿ ಹಿಟ್ಟನ್ನು ಕೂಡ ಇವರು ರಂಗೋಲಿಗೆ ಬಳಸುತ್ತಾರೆ.

ಕೋಲಾರ, ತೀರ್ಥಹಳ್ಳಿಗಳಲ್ಲಿ ಬೆಣಚುಗಲ್ಲಿನ ಗಣಿಗಳಿವೆ. ಅಲ್ಲಿ ದೊರಕುವ ಬಿಳಿ ಹುಡಿಯನ್ನು ರಂಗೋಲಿಯ ಬಿಳಿಬಣ್ಣಕ್ಕಾಗಿ ಬಳಸುತ್ತಾರೆ. ಬೆಣಚುಗಲ್ಲಿನ ಪುಡಿಯನ್ನು ಮಾರಾಟ ಮಾಡುವುದು ಅಲ್ಲಿ ಒಂದು ಉದ್ಯೋಗವಾಗಿದೆ.

ಆಹಾರ ಸಾಮಗ್ರಿಗಳನ್ನು ಬಳಸಿದ ಮೇಲೆ ಉಳಿಯುವ 'ಜಿಡಕನ್ನು' ಸಿಪ್ಪೆಯನ್ನು ಬಣ್ಣಕ್ಕಾಗಿ ಬಳಸುವುದೂ ಉಂಟು. ಕುದಿಸಿ ಸೋಸಿದಾಗ ಉಳಿಯುವ ಕಾಫೀಪುಡಿ, ತೆಂಗಿನಕಾಯಿಯ ಹಾಲನ್ನು ತೆಗೆದ ಮೇಲೆ ಉಳಿಯುವ 'ಸುಂಬು', ಬತ್ತದಸಿಪ್ಪೆ ಮುಂತಾದವುಗಳನ್ನು ರಂಗೋಲಿಯ ಬಣ್ಣದ ಪುಡಿಯಂತೆ ಬಳಸುತ್ತಾರೆ. ತೆಂಗಿನಕಾಯಿಯ ಸುಂಬಿಗೆ ತಮಗೆ ಇಷ್ಟವಾದ ಬಣ್ಣವನ್ನು ಬೆರೆಸಿದ ಮಳಲನ್ನು ಸೇರಿಸಿಕೊಳ್ಳಬೇಕು. ಈ ಬಣ್ಣವನ್ನು ತುಂಬಿದಾಗ ರಂಗೋಲಿಯು ಉಣ್ಣೆಯ ಬಟ್ಟೆಯ ತುಂಡುಗಳಿಂದ ರಚಿತವಾದಂತೆ ಕಾಣುತ್ತದೆ. ಅಡುಗೆಗೆ ಉಪಯೋಗವಾಗುವ ಧಾನ್ಯಗಳೂ ಕೂಡ ನೇರವಾಗಿ ರಂಗೋಲಿಗೆ ಬಣ್ಣವನ್ನು ಒದಗಿಸುತ್ತವೆ. ಗಸಗಸೆ, ಎಳ್ಳು, ಉದ್ದು, ಸಾಬು ಅಕ್ಕಿ, ಬೆಣತಿಗೆ ಅಕ್ಕಿ, ಭತ್ತ, ಜೋಳ, ಗೋಧಿ, ಮಸೂರಿ ಬೇಳೆ, ತೊಗರಿಬೇಳೆ, ಉದ್ದಿನಬೇಳೆಗಳು ರಂಗೋಲಿಯಲ್ಲಿ ಬಳಕೆಗೊಳ್ಳುತ್ತವೆ.

ರಂಗೋಲಿಯ ಬಣ್ಣಕ್ಕಾಗಿ ಬಳಸುವ ವಸ್ತುಗಳ ವ್ಯಾಪ್ತಿ ಬಹಳ ವಿಸ್ತಾರವಾದದ್ದು. ಕೇರಳ ಹಾಗೂ ಕರ್ನಾಟಕದ ಸಾಂಪ್ರದಾಯಿಕ ರಂಗೋಲಿಯಲ್ಲಿ ಹೂ, ಕಾಯಿ, ಎಲೆ, ಬೀಜಗಳನ್ನು ಬಳಸಲಾಗುತ್ತದೆ. ಕರ್ನಾಟಕದ ಕರಾವಳಿಯಲ್ಲಿ 'ಹಿಂಡ್ಲಿ' ಕಾಯಿಗಳನ್ನು ಮಣ್ಣಿನ ಮೇಲೆ ಕೋಟೆಯಾಕಾರದಲ್ಲಿ ಜೋಡಿಸುತ್ತಾರೆ. ಇದು ದೀಪಾವಳಿ ಹಬ್ಬದ ವಿಶೇಷ ರಂಗೋಲಿ. ಇದನ್ನು'ಹೊಂಡೆ' ಎನ್ನುತ್ತಾರೆ. ಹೊಂಡೆಯನ್ನು ಬಲೀಂದ್ರನ ಕೋಟೆಯೆಂದು ತಿಳಿಯುತ್ತಾರೆ. ಹೂವು, ತರಕಾರಿ, ಹಣ್ಣು, ಎಲೆ, ಬೀಜಗಳನ್ನು ಇಡಿಯಾಗಿ ಅಥವಾ ಕತ್ತರಿಸಿ ಬಳಸಿಕೊಂಡು ರಂಗೋಲಿ ರಚಿಸುವುದು ಒಂದು ಹವ್ಯಾಸ. ಈ ಹವ್ಯಾಸವು ನಮ್ಮ ದೇಶದ ಹಲವು ಕಡೆ ಬೆಳೆಯುತ್ತಿದೆ. ಒಟ್ಟಾರೆ ರಂಗೋಲಿಯ ಬಣ್ಣವು ನೀರುಬಣ್ಣ, ಪುಡಿಬಣ್ಣಕ್ಕಷ್ಟೇ ಸೀಮಿತವಾಗಿ ಉಳಿದಿಲ್ಲ. ನಿಸರ್ಗದ ನೂರಾರು ಬಗೆಯ ಬಣ್ಣದ ವಸ್ತುಗಳನ್ನು ರಂಗೋಲಿಯ ಬಣ್ಣವು ಒಳಗೊಳ್ಳುತ್ತದೆ.

ತಾವು ರಚಿಸಿದ ರಂಗೋಲಿಯನ್ನು ಹೆಚ್ಚು ಕಾಲ ಉಳಿಸಿಕೊಳ್ಳಬೇಕು ಎಂಬ ಅಭಿಲಾಷೆಯು ರಂಗೋಲಿಕಾರರಿಗೆ ಇರುವುದು ಸಹಜ. ರಂಗೋಲಿಯನ್ನು ಹೆಚ್ಚು ಕಾಲ ಉಳಿಸಿಕೊಳ್ಳಲು ಇವರು ಹಲವು ಕ್ರಮಗಳನ್ನು ಕೈಗೊಳ್ಳುತ್ತಾರೆ. ನೀರುಬಣ್ಣಕ್ಕೆ ಹಾಲು, ಮಜ್ಜಿಗೆ, ಗೋಂದು ಇವುಗಳಲ್ಲೊಂದನ್ನು ಬೆರೆಸುವುದು ಒಂದು ಕ್ರಮ. ಕಾಡಿನ ಮರಗಳಲ್ಲಿ ದೊರೆಯುವ ಅಂಟನ್ನು ನೀರಿನಲ್ಲಿ ನೆನೆಯಿಸಿ ಬಣ್ಣಕ್ಕೆ ಸೇರಿಸುವುದು ಕಾಡಿನ ಬಳಿಯ ಜನರು ಅನುಸರಿಸುವ ಇನ್ನೊಂದು ಕ್ರಮವಾಗಿದೆ. ಅಂಟಿನಿಂದ ರಂಗೋಲಿಯನ್ನು ರಚಿಸಿಕೊಂಡು ಅದರ ಮೇಲೆ ಧಾನ್ಯ, ಹೂವುಗಳನ್ನು ಅಂಟಿಸುವ ಪದ್ಧತಿಯೂ ಇದೆ. ಇಂಥ ರಂಗೋಲಿಯು ಹೆಚ್ಚು ಕಾಲ ಬಾಳುತ್ತದೆ. ರಂಗೋಲಿಯನ್ನು ಹೆಚ್ಚು ಕಾಲ ಬಾಳಿಸಬೇಕೆಂಬ ಆಕಾಂಕ್ಷೆಯು ಪೇಂಟಿನ ರಂಗೋಲಿಗೆ ಜನ್ಮ ಕೊಟ್ಟಿದೆ. ಪೇಟೆ, ಪಟ್ಟಣಗಳಲ್ಲಿಯ ಮನೆಯ ಹೊಸ್ತಿಲಲ್ಲಿ, ಅಂಗಳದಲ್ಲಿ, ಬಾಗಿಲು ಚೌಕಟ್ಟಿನ ಬದಿಯಲ್ಲಿ ಪೇಂಟಿನ ರಂಗೋಲಿಗಳು ಕಾಣತೊಡಗಿವೆ.

ಸುಮಾರು ಒಂದು ಅಂಗೈಯಷ್ಟು ಅಗಲದ ಹಳೆಬಟ್ಟೆಯ ತುಂಡು ರಂಗೋಲಿಯ ಕುಂಚವಾಗುತ್ತದೆ. ಬಟ್ಟೆಯ ತುಂಡನ್ನು ಬಣ್ಣದಲ್ಲಿ ಅದ್ದಿಸಿಕೊಳ್ಳಬೇಕು. ಹೆಬ್ಬೆರಳು ಹಾಗೂ ನಡುವಿನ ಎರಡು ಬೆರಳುಗಳನ್ನು ಕೂಡಿಸಿ ಬಟ್ಟೆಯ ತುಂಡನ್ನು ಹಿಡಿದುಕೊಳ್ಳಬೇಕು. ಕೆಳಗಿನ ಎರಡು ಬೆರಳುಗಳನ್ನು ನೆಲಕ್ಕೆ ಊರಿ ಬೆರಳುಗಳನ್ನು ನಿರ್ದಿಷ್ಟ ಗುರಿಯತ್ತ ನಡೆಯಿಸಬೇಕು. ಬೆರಳುಗಳು ನಡೆಯುವಾಗ ಬಟ್ಟೆಯ ಕುಂಚವನ್ನು ಮೆಲ್ಲಗೆ ಹೆಬ್ಬೆರಳಿನಿಂದ ಒತ್ತುತ್ತಿರಬೇಕು. ಆಗ ನೀರುಬಣ್ಣವು ನೆಲದ ಮೇಲೆ ಜೋಡುಗೆರೆಗಳಲ್ಲಿ ಮೂಡುತ್ತದೆ. ಈ ಜೋಡು ಗೆರೆಗಳು ನೇರ, ಓರೆ, ಅಡ್ಡವಾಗಿರಬಹುದು. ನಾಗದ ನಡಿಗೆಯಂತೆ ತರಂಗಿತವಾಗಿರಬಹುದು. ಯಾವುದೇ ಬಗೆಯ ಗೆರೆ ಮೂಡಿದರೂ ಎರಡು ಗೆರೆಗಳ ನಡುವೆ ಸಮಾಂತರವಿರುತ್ತದೆ. ಬಟ್ಟೆಯ ತುಂಡಿನ ಬದಲಿಗೆ ಕಂಬಳಿ ತುಂಡು ಅಥವಾ ಹತ್ತಿಯನ್ನು ಬಳಸುವುದುಂಟು. ಈ ನಮೂನೆಯ ಕುಂಚದ ಬಳಕೆಯು ಉತ್ತರ ಕನ್ನಡದ ನಾಡವರು, ಹಾಲಕ್ಕಿ ಒಕ್ಕಲು ನಾಮಧಾರಿಗಳಲ್ಲಿ ಕಂಡು ಬರುತ್ತದೆ. ತಮಿಳರು ಕೂಡ ಇದೇ ಬಗೆಯ ಕುಂಚವನ್ನು ಬಳಸುತ್ತಾರೆ. ಉತ್ತರ ಕರ್ನಾಟಕದಲ್ಲಿ 'ಸುಣ್ಣ ಬಣ್ಣ' ಮಾಡುವಾಗ ದೊಡ್ಡ ಬಟ್ಟೆಯನ್ನು ಬಳಸುತ್ತಾರೆ. ಬಣ್ಣದಲ್ಲಿ ಅದ್ದಿದ ಬಟ್ಟೆಯನ್ನು ಗೋಡೆಯ ಮೇಲೆ ಎಳೆದಾಗ ಗೇಣಗಲ ಪಟ್ಟಿಗಳು ಮೂಡುತ್ತವೆ.




ಕರಾವಳಿಯ ಗಾಮೊಕ್ಕಲು ಅಡಕೆಯ ಸಿಪ್ಪೆಯನ್ನು ಮುಕ್ರಿಗಳು ಅಡಕೆಯ ಹಾಳೆಯನ್ನು ಕುಂಚಕ್ಕಾಗಿ ಬಳಸುತ್ತಾರೆ. ಮಲೆನಾಡಿನ ದೀವರು ಅಡಕೆಯ ಹಾಳೆಯಿಂದ ಕುಂಚವನ್ನು ತಯಾರಿಸಿಕೊಳ್ಳುತ್ತಾರೆ. ಅಡಕೆಯ ಹಾಳೆಯನ್ನಾಗಲೀ, ಸಿಪ್ಪೆಯನ್ನಾಗಲೀ ಕತ್ತರಿಸಿ ನಾಲ್ಕು ಅಥವಾ ಐದು ಬೆರಳುಳ್ಳ ಹಸ್ತದ ಆಕಾರ ಕೊಡುತ್ತಾರೆ. ಈ ಕುಂಚವನ್ನು ಬಳಸಿದಾಗ ನಾಲ್ಕು ಅಥವಾ ಐದು ಸಮಾಂತರ ಗೆರೆಗಳು ಒಮ್ಮೆಲೆ ಮೂಡಿ ರಂಗೋಲಿಯ ಚೆಂದ ಹೆಚ್ಚುತ್ತದೆ. ಸುಂದರ ಗೆರೆಯನ್ನು ಮೂಡಿಸಬಲ್ಲ ಈ ಸಾಧನವನ್ನು "ಗೆರ್ಕೆ" ಎನ್ನುತ್ತಾರೆ.

ಭತ್ತದ ಹುಲ್ಲನ್ನು ಸುಮಾರು ಮೂರು ಅಂಗುಲ ಅಳತೆಯಲ್ಲಿ ತೆಗೆದುಕೊಂಡು ಅದರ ಒಂದು ತುದಿಯ ಗಂಟನ್ನು ಕತ್ತರಿಸಬೇಕು. ಈ ಕೊಳವೆಯಲ್ಲಿ ಕೋಳಿಗರಿಯನ್ನಾಗಲೀ ತುದಿಗೆ ಆಕಾರ ಕೊಟ್ಟ ಪೊಂಡಿ ನಾರನ್ನಾಗಲೀ ಸೇರಿಸಬೇಕು. ಆಗ ಚಿಕ್ಕ ಬ್ರಶ್ ಸಿದ್ಧವಾಗುತ್ತದೆ. ಸಣ್ಣ ಬಿದಿರುಕಡ್ಡಿಗೆ ತುದಿಯಲ್ಲಿ ತುಸು ಹತ್ತಿಯನ್ನು ದಾರದಿಂದ ಗಟ್ಟಿಯಾಗಿ ಕಟ್ಟಿದರೆ ಗಟ್ಟಿ ಹಿಡಿಕೆಯ ಬ್ರಶ್ ದೊರೆಯುತ್ತದೆ. ಹತ್ತಿಯ ಬದಲಿಗೆ ತೆಳ್ಳಗಿನ ತುಸು ಬಟ್ಟೆಯನ್ನು ಸುತ್ತಬಹುದು. ತೆಂಗಿನಕಾಯಿಯ ಜುಟ್ಟದ ಜುಮರು (ನಾರು) ಅಡಕೆ ಸಿಪ್ಪೆಯ ಸುಂಬು(ನಾರು)ಗಳನ್ನು ಸಣ್ಣ ದಾರದಲ್ಲಿ ಕಟ್ಟಿಕೊಂಡು ಕುಂಚದಂತೆ ಬಳಸುತ್ತಾರೆ. ಇಂಥ ಕುಂಚಗಳು ಗೋಡೆ, ಬುಟ್ಟಿ, ಮಡಕೆ ಮುಂತಾದವುಗಳ ಮೇಲೆ ನೀರುಬಣ್ಣದಿಂದ ರಂಗೋಲಿ ಎಳೆಯಲು ಹೆಚ್ಚು ಅನುಕೂಲವಾಗಿರುತ್ತವೆ. ಹತ್ತಿ ಅಥವಾ ತೆಳು ಬಟ್ಟೆಯಿಂದ ದೀಪವನ್ನು ಉರಿಸುವುದಕ್ಕಾಗಿ ನೆಣೆ (ಬತ್ತಿ)ಯನ್ನು ತಯಾರಿಸುತ್ತಾರಷ್ಟೆ. ಈ ನೆಣೆಯಿಂದ ನಾಜೂಕಾದ ರಂಗೋಲಿಯನ್ನು ಎಳೆಯಲು ಅನುಕೂಲವಾಗುತ್ತದೆ. ಹತ್ತಿಯನ್ನು ಬೆರಳುದ್ದಕ್ಕೆ ಹೊಸೆದು ಕೈಯಿಂದ ತಿರುಪಿದರೆ ನೆಣೆ ಸಿದ್ಧವಾಗುತ್ತದೆ. ಬಟ್ಟೆಯ ತುಂಡನ್ನು ಕೂಡ ಕೈಯಿಂದ ತಿರುಪಿ ನೆಣೆಯನ್ನು ತಯಾರಿಸುತ್ತಾರೆ.

ದೀಪಾವಳಿಯ ಹೊತ್ತಿಗೆ ಬೆಂಗಳೂರಿನ ರಸ್ತೆಯ ಮೇಲೆ ದೈತ್ಯಾಕಾರದ ರಂಗೋಲಿಗಳು ರಚನೆಗೊಳ್ಳುತ್ತವೆ. ಅಂಗಡಿಕಾರರು ರಂಗೋಲಿಯನ್ನು ರಚಿಸಲು ರಂಗೋಲಿ ಕಲಾಕಾರರನ್ನು ನೇಮಿಸುತ್ತಾರೆ. ಈ ಕಲಾಕಾರರು ಕಸಬರಿಗೆಯನ್ನೇ ಉದ್ದಕೋಲಿಗೆ ಕಟ್ಟಿ ರಸ್ತೆಯ ಅಗಲದಷ್ಟು ದೊಡ್ಡ ರಂಗೋಲಿಯನ್ನು ರಚಿಸುತ್ತಾರೆ.

ಜಾನಪದರು ರಂಗೋಲಿಗಾಗಿ ಆರಿಸಿಕೊಂಡ ವಸ್ತುಗಳ ಸಂಖ್ಯೆ ಅಪಾರವಾದದ್ದು. ಅವರ ಸುತ್ತಲಿನ ನಿಸರ್ಗವೇ ರಂಗೋಲಿಯಲ್ಲಿ ಮೈದಾಳುತ್ತದೆ. ಆದರೆ ವಸ್ತುಗಳ ಆಯ್ಕೆಯು ಅವುಗಳೊಂದಿಗೆ ಅವರಿಗಿರುವ ವಹಿವಾಟಿನ ಪ್ರಮಾಣವನ್ನು ಅವಲಂಬಿಸಿರುತ್ತದೆ.

'ಶಿಂಗಾರ ಎಳೆ' ಆರತಿ ಚೆಂಡೆ, ತುಳಸಿಕಟ್ಟೆ, ಬಿಲ್ವಪತ್ರೆ, ಮಂಟಪ, ಸೀತೆಮುಡಿ, ಗಣಪತಿ ಮಂಡಲ, ಈಶ್ವರನ ಜಡೆ, ಯಜ್ಞೇಶ್ವರನ ನಾಲಗೆ, ಸ್ವಸ್ತಿಕ, ಕೂರ್ಮ, ಶಂಖ, ಚಕ್ರ, ಸೂರ್ಯನ ಕದಿರು, ದೀಪದ ಸರಪಳಿ, ಕನ್ನಡಿ, ಹೂವಿನ ಶಿಬ್ಬಲು (ಬುಟ್ಟಿ) ಇತ್ಯಾದಿ ನೂರಾರು ವಸ್ತುಗಳು ಬ್ರಾಹ್ಮಣ ಜನಾಂಗದವರ ರಂಗೋಲಿಯಲ್ಲಿ ರಚನೆಯಾಗುತ್ತವೆ. ಉತ್ತರ ಕನ್ನಡ ಜಿಲ್ಲೆಯ ಗೋಕರ್ಣದ ಕೋಟಿತೀರ್ಥದ ಸುತ್ತ ಇಂತಹ ನೂರಾರು ರಂಗೋಲಿಗಳನ್ನು ನಿತ್ಯ ನೋಡಬಹುದು. ವಿಶೇಷ ದಿನಗಳಲ್ಲಿ ಇಲ್ಲಿಯ ರಂಗೋಲಿಗೆ ಹೆಚ್ಚು ರಂಗೇರುತ್ತದೆ.

ಸೂರ್ಯನ ಕದಿರು

ಚಕ್ರ


ಕೃಷಿಕರ ರಂಗೋಲಿಯ ವಸ್ತುಗಳ ವೈವಿಧ್ಯತೆಯ ತೆರವೇ ಬೇರೆ. ಕಣಜ, ಬುಟ್ಟಿ, ಕತ್ತಿ, ಬೆಳೆ, ಇಲಿ, ಬೆಕ್ಕು, ಕುತ್ತರಿ (ಬಣಿವೆ) ಕೆಲಸಗಾರರು, ಅಡಕೆ ಕೊನೆ, ಕಾಯಿ ಹಿಂಡಗೆ (ತೆಂಗಿನಕಾಯಿಯ ಗೊಂಚಲು) ಮುಂತಾದ ಕೃಷಿಯ ಸಲಕರಣೆಗಳನ್ನು ಮತ್ತು ಕೃಷಿ ಉತ್ಪನ್ನಗಳನ್ನು ರಂಗೋಲಿಯಲ್ಲಿ ರಚಿಸುತ್ತಾರೆ.

ನಮ್ಮ ದೇಶದ ರಂಗೋಲಿಕಾರರಿಗೆ ನವಿಲಿನ ಚಿತ್ರ ಬಿಡಿಸುವುದೆಂದರೆ ತುಂಬಾ ಅಚ್ಚುಮೆಚ್ಚು. ಇವರ ಗುಡಿಸಲುಗಳ ಗೋಡೆಯ ಮೇಲೆ ನವಿಲು ನರ್ತಿಸುತ್ತಿರುವುದನ್ನು ಕಾಣಬಹುದು. ನವಿಲಿನ ಚಿತ್ರ ಬರೆಯುವ ಪದ್ಧತಿ ಬಹಳ ಹಿಂದಿನದು. ಸುಮಾರು ಐದು ಸಾವಿರ ವರ್ಷಗಳ ಹಿಂದೆ ಸಿಂಧೂ ನದೀ ಪ್ರದೇಶದಲ್ಲಿ ವಾಸವಾಗಿದ್ದ ಜನರು ನವಿಲಿನ

ಚಿತ್ರವನ್ನು ಬಿಡಿಸುತ್ತಿದ್ದರು. ಶವಗಳನ್ನು ಅವರು ಮಣ್ಣಿನ ಪಾತ್ರೆಗಳಲ್ಲಿ ತುಂಬಿ ಹುಗಿಯುತ್ತಿದ್ದರು. ಈ ಪಾತ್ರೆಗಳನ್ನು ನಾವು ಶವಕರಂಡಕಗಳು ಎನ್ನುತ್ತೇವೆ. ಶವಕರಂಡಕಗಳ ಮೇಲೆ ಅಂದಿನ ಜನರು ರಂಗೋಲಿ ನಮೂನೆಗಳ ಜೊತೆಗೆ ನವಿಲಿನ ಚಿತ್ರವನ್ನೂ ಬಿಡಿಸಿದ್ದಾರೆ. ನೆಲದಡಿಯಲ್ಲಿದ್ದ ಇಂಥ ಶವಕರಂಡಕಗಳು ನಮಗೆ ದೊರೆತಿವೆ.

ರಂಗೋಲಿಯಲ್ಲಿ ಬಳಸಲಾಗುವ ವಸ್ತುಗಳನ್ನು ಎಲ್ಲೆಂದರಲ್ಲಿ ಮನಸ್ಸಿಗೆ ಕಂಡಂತೆ ರಚಿಸುವುದಿಲ್ಲ. ಸಂದರ್ಭಕ್ಕೆ ತಕ್ಕಂತೆ ಆಯಾ ದಿನದ ರಂಗೋಲಿಗೆ ಮಾತ್ರ ವಿಶಿಷ್ಟವಾಗಿರುವ ವಸ್ತುಗಳ ಆಯ್ಕೆ ನಡೆಯುತ್ತದೆ. ಜನನ, ಶೋಭನ, ಮದುವೆ ಹಾಗೂ ಆಯಾ ಹಬ್ಬ ಹುಣ್ಣಿಮೆಗಳಿಗೆ ಹೊಂದುವ ವಸ್ತುಗಳನ್ನೇ ರಂಗೋಲಿಯಲ್ಲಿ ರೂಪಿಸುತ್ತಾರೆ. ರಂಗೋಲಿಯನ್ನು ರಚಿಸುವ ಮೊದಲು ಫಲಕಗಳನ್ನು ತೊಳೆಯುತ್ತಾರೆ, ಸಾರಿಸುತ್ತಾರೆ, ಅಥವಾ ಬಣ್ಣವನ್ನು ಹಚ್ಚಿ ಸಿದ್ಧಪಡಿಸಿಕೊಳ್ಳುತ್ತಾರೆ.


'ತೊಟ್ಟಿಲು ಶಾಸ್ತ್ರ' ನಡೆಯುವಾಗ ಬಾಣಂತಿಯ ಕೋಣೆಯನ್ನು ಸಗಣಿಯಿಂದ ಸಾರಿಸುತ್ತಾರೆ. ಬಳಿಕ ಅಲ್ಲಿ ತೊಟ್ಟಿಲನ್ನು ಬರೆಯುತ್ತಾರೆ. ಹಾಲಕ್ಕಿ ಒಕ್ಕಲಿಗರು ಬರೆಯುವ ತೊಟ್ಟಿಲುಶಾಸ್ತ್ರದ ರಂಗೋಲಿ ಸರಳವೂ ಸುಂದರವೂ ಆಗಿರುತ್ತದೆ.



ತೊಟ್ಟಿಲ ಸಮಾರಂಭದ ರಂಗೋಲಿಗಳು

ಮದುವೆ ಮನೆಯ ರಂಗೋಲಿಯ ವೈಭವವನ್ನು ಕಣ್ಣಾರೆ ಕಂಡೇ ಸವಿಯಬೇಕು. ಮದುವೆ ಮನೆಯ ರಂಗೋಲಿಯನ್ನು ರಚಿಸುವ ಮೊದಲು ಗೋಡೆ ಮತ್ತು ನೆಲಕ್ಕೆ ಹೊಸಮಣ್ಣನ್ನು

ಲೇಪಿಸುತ್ತಾರೆ. ಒಣಗುತ್ತಿರುವ ಸುಣ್ಣದ ತಿಳಿನೀರನ್ನು ತಳಿದು ನುಣುಪಾದ ಕಲ್ಲಿನಿಂದ ಒರೆಯುತ್ತಾರೆ. ನೆಲಕ್ಕೆ ಹೊಳಪು ಬರುತ್ತದೆ. ಆಗ ನೀರಿನಲ್ಲಿ ಸಗಣಿಯನ್ನು ಕದಡಿಕೊಳ್ಳುತ್ತಾರೆ.



ಮದುವೆ ಮನೆಯ ರಂಗೋಲೆ

ಕದಡಿದ ಸಗಣಿಯನ್ನು ನೆಲಕ್ಕೆ ಹಚ್ಚಿ ಮೆಲ್ಲಗೆ ಅಡಕೆಯ ಹಾಳೆಯಿಂದ ಸಾರಿಸುತ್ತಾರೆ. ಸಗಣಿ ಸಾರಿಸಿದ ನೆಲವು ತಂಪಾಗಿ ಸೊಂಪಾಗಿರುತ್ತದೆ. ಕರ್ನಾಟಕದ ಕರಾವಳಿಗುಂಟ ಜಂಬಿಟ್ಟಿಗೆಯ ಗಣಿಗಳಿವೆ. ಈ ಗಣಿಗಳಲ್ಲಿ ದೊರಕುವ ಮಣ್ಣಿನಿಂದ ಮನೆಯ ನೆಲ ಮತ್ತು ಅಂಗಳದ ನೆಲವನ್ನು ತಯಾರಿಸುತ್ತಾರೆ. ಈ ನೆಲವು ಕೆಂಪು-ದಾಸವಾಳದ ಬಣ್ಣವನ್ನು ಪಡೆದು ಹೊಳೆಯುತ್ತದೆ. ನೆಲದ ಈ ಬಣ್ಣವು 'ಹಲಿ'ಗೆ ಸುಂದರ ಹಿನ್ನೆಲೆಯನ್ನು ಒದಗಿಸುತ್ತದೆ.

"ಹಲಿ ತೆಗೆಯುವುದು" ಮದುವೆಯ ಒಂದು ಪ್ರಮುಖ ಕಾರ್ಯಕ್ರಮವಾಗಿದೆ. ಹಲಿಯ ಜೊತೆಗೆ ಹಾಡೂ ಇರುತ್ತದೆ. ಆದ್ದರಿಂದಲೇ ಹಾಡು-ಹಲಿ ಇವು ಜೋಡು ನುಡಿಗಳಾಗಿ ರೂಢಿಯಲ್ಲಿವೆ.


ಮುದಿಯಾ (ಮದುವೆ) ಮುದಿಯಾ ಚೆಂದಾ
ಮುಗುಳು ಮಂಟಪ ಚೆಂದಾ
ಮುದಿಯಾದಲ್ ಹುವ್ವಾ (ಹೊಯ್ಯುವ) ಹಲಿ ಚೆಂದಾ
ಹಲಿಚೆಂದಾ ಚೆಪ್ಪರ ಚೆಂದಾ
ಮೊದು ಮಕ್ಕಳಿರುವಾ ಮನೆ ಚೆಂದಾ.

ಹೀಗೆ ನೂರಾರು ಹಾಡು ಹೇಳುತ್ತ ರಂಗೋಲಿಯ ಅಂದವನ್ನು ಹೊಗಳುತ್ತಾರೆ.

ಮದುವೆ ಮನೆಯ ರಂಗೋಲಿಯಲ್ಲಿ 'ಹಸಗರ'ದ ರಂಗೋಲಿ ಪ್ರಮುಖವಾದದ್ದು. ಹಸಗರವೆಂದರೆ ಹಸೆಯ ಮನೆ. ಮದುಮಕ್ಕಳು ಸಿಂಗಾರಗೊಂಡು ಕುಳಿತುಕೊಳ್ಳುವ ಸ್ಥಾನದ ಹಿಂಬದಿಯ ಗೋಡೆಯೇ ಹಸೆಗೋಡೆ. ಇದು ಪೂರ್ವದಿಕ್ಕಿಗೆ ಮುಖವಾಗಿರುತ್ತದೆ. ಈ ಗೋಡೆಯ ಮೇಲೆ ಸುಮಾರು ಒಂದು ಮಾರು ಉದ್ದಗಲವುಳ್ಳ ಚೌಕವನ್ನು ಬಣ್ಣದಲ್ಲಿ ಅದ್ದಿದ ದಾರದ ಸಹಾಯದಿಂದ ಗುರುತಿಸಿಕೊಳ್ಳುತ್ತಾರೆ. ಚೌಕದ ತುಂಬ ಬಣ್ಣವನ್ನು ಬಳಿಯುತ್ತಾರೆ. ಈ ಬಣ್ಣ ರಂಗೋಲಿಗೆ ಹಿನ್ನೆಲೆಯಾಗುತ್ತದೆ. ಮಸಿಯನ್ನು ಮಿಶ್ರ ಮಾಡಿ ಸಾರಿಸಿದಾಗ ನೆಲ ಕಪ್ಪಾಗುತ್ತದೆ. ಮಸಿಯನ್ನು ಬೆರೆಸದೆ ಸಾರಿಸಿದಾಗ ನೆಲ ತಿಳಿ ಹಸುರಾಗುತ್ತದೆ. ಈ ಕಪ್ಪು ಹಾಗೂ ತಿಳಿ ಹಸಿರು ನೆಲವು ಕೂಡ ರಂಗೋಲಿಗೆ ಹಿನ್ನೆಲೆಯ ಬಣ್ಣವಾಗುತ್ತದೆ.

ಉತ್ತರ ಕನ್ನಡ ಜಿಲ್ಲೆಯ ಗೊಂಡರು ಹಸಗರಕ್ಕೆ ಹಿನ್ನೆಲೆಯಲ್ಲಿ ಕೆಂಪು ಬಣ್ಣವನ್ನು ಹಚ್ಚಿ ಬಿಳಿ ಬಣ್ಣದಿಂದ ರಂಗೋಲಿ ಎಳೆಯುತ್ತಾರೆ. ಹಾಲಕ್ಕಿ ಒಕ್ಕಲಿಗರು, ಕರೆ ಒಕ್ಕಲಿಗರು ಸಗಣಿ ಸಾರಿಸಿದ ಗೋಡೆಯ ಮೇಲೆ ಬಿಳಿ ಬಣ್ಣದಿಂದ ಹಲಿಯನ್ನು ರಚಿಸುತ್ತಾರೆ. ನಾಡವರು ಬಿಳಿ ಬಣ್ಣವನ್ನು ಹಚ್ಚಿದ ಗೋಡೆಯ ಮೇಲೆ ಕೆಂಪು ಬಣ್ಣದಿಂದ 'ಹಲಿ' ತೆಗೆಯುತ್ತಾರೆ.

ಹಸಗರವು ಹೆಣ್ಣಿನ ಮನೆ ಹಾಗೂ ಗಂಡಿನ ಮನೆಗಳೆರಡರಲ್ಲೂ ಸಿದ್ಧಗೊಳ್ಳುತ್ತದೆ. ಹಸಗರದ ಪ್ರಥಮ ಗೆರೆಯನ್ನು ತಂತಮ್ಮ ಮನೆಯಲ್ಲಿ ಮದುಮಕ್ಕಳೇ ತಮ್ಮ ಕೈಯಾರೆ ಎಳೆಯುತ್ತಾರೆ.



ಗಿಂಡಿ

ಉತ್ತರ ಕನ್ನಡದ ನಾಡವರು ಹಸಗರವನ್ನು ಹಸೆಗೆರೆಯೆನ್ನುತ್ತಾರೆ. ಹಸೆಗೆರೆಗೆ ಹಿನ್ನೆಲೆಯಲ್ಲಿ ಬಿಳಿ ಶೇಡಿಯನ್ನು ಬಳಿದು ಅದರ ಮೇಲೆ ಜಾಂಜಿನಿಂದ ಹಲಿಯನ್ನು ಬಿಡಿಸುತ್ತಾರೆ. ಇವರು ರಚಿಸುವ ಹಸೆಗೆರೆಯ ಚೌಕದಗುಂಟ ಸುಂದರ ನಕ್ಷೆಗಳಿರುತ್ತವೆ. ಗೆರೆಗಳನ್ನು ಅಡ್ಡ, ಉದ್ದ, ನೇರ, ಓರೆಯಾಗಿ ಎಳೆದು ಜೋಡಿಸುತ್ತ ಚೌಕಟ್ಟನ್ನು ತಯಾರಿಸುತ್ತಾರೆ. ಈ ಚೌಕಟ್ಟಿನಲ್ಲಿ ಮೂಡುವ ನಕ್ಷೆಗಳ ಹೆಸರುಗಳನ್ನು ಕೇಳುವುದೇ ಒಂದು ಆನಂದ. ಮಲೆನಾಡ ಜಟ್ಟಿ, ಕಂಬಿ, ಗಿಂಡಿ, ಸರಪಳಿ, ಕಳಸ, ಚಿತ್ರಗಲ್ಲು ಇವು ಸುತ್ತಲೂ ಕಂಗೊಳಿಸುತ್ತವೆ. ನಡುವೆ ಮಂಟಪ, ತೊಂಡಿಲು, ಬಾಸಿಂಗ, ಬಾಚಣಿಗೆ, ಚೀರಣಿಗೆಗಳನ್ನು ರಚಿಸುತ್ತಾರೆ. ಹಾಸುಹೊಕ್ಕುಗಳು ಎದ್ದು ಕಾಣುವಂತೆ ಬಣ್ಣ ತುಂಬುತ್ತಾರೆ. ಈ ಕ್ರಿಯೆಯನ್ನು 'ಚೌಕ' ತುಂಬುವುದು ಎನ್ನುತ್ತಾರೆ. ಹಸೆ ಬರೆಯುವವರು ತಮ್ಮ ಕೆಲಸದಲ್ಲಿ ತೊಡಗಿರುವಾಗ ಹಾಡುಗಾರ್ತಿಯರು ಹಾಡುತ್ತಾರೆ.

"ಜಾಂಜನ ಪಟ್ಟೇಯಾ ಚೆಂದಾದಲ್ ತೆಗದಾರೇ
ಮೋಡನರಗೆರಿಯಾ ಬರದಾರೇ।ನಮ್ಮಾಮನಿಯಾ
ಮುದ್ದೂ ಕಂದಯ್ಯಾ ಮುದವೀಗೆ
ಹಸೆಯ ಹಾಸವ್ರೆ ಹಸಗರ ಬರದವ್ರೆ
ಮನೇ ಪಪ್ಪಳವ ಬಿಡುಸವ್ರೆ। ಪಾಂಡವರ
ಸಿಸುವಾ ಸಿಂಗರಿಸಿ ಕುಳಿಸವ್ರೆ "

ಎಂದು ಹಸಗರದ ರಂಗೋಲಿಯ ಅಂದವನ್ನು ಹಾಡುಗಾರ್ತಿಯರು ಮೆಚ್ಚಿಕೊಳ್ಳುತ್ತಾ ಹಾಡುತ್ತಾರೆ. "ಮುತ್ತಿನ ಒಳಗೋಡೆ ಮುತ್ತಿನ ಹೆರಗೋಡೆ, ಮುತ್ತಾ ರನ್ನಸದಾ ಅರಮನೆ" ಎಂದು ಬಾಯಿ ತುಂಬಾ ಹೊಗಳುತ್ತಾರೆ.

ಉತ್ತರ ಕನ್ನಡದ ಗೊಂಡರ ಹಸಗರದ ಮೇಲುಗಡೆಯ ಸಾಲಿನಲ್ಲಿ ದೇವಸ್ಥಾನ, ಎಳ್ಳಿಮರ(ಅಶ್ವತ್ಥಮರ), ತೆಂಗಿನಮರ, ಅಕ್ಕಿಮೂಡೆ ಮುಂತಾದವುಗಳ ಚಿತ್ತಾರವಿರುತ್ತದೆ. ಅದರ ಕೆಳಗಿನ ಸಾಲಿನಲ್ಲಿ ಬಾಸಿಂಗ, ಕೊಂಡ್ಲಿ (ತೊಂಡಿಲು) ತೆಂಗಿನಕಾಯಿಯ ಗೆಂಚ್ಲೆ (ಜೋಡಿಸಿದ ತೆಂಗಿನಕಾಯಿಗಳು) ಇರುತ್ತದೆ. ಕೆಳಗೆ ಮೂರನೆಯ ಸಾಲಿನಲ್ಲಿ ಮದುಮಕ್ಕಳು, ತೆತ್ತಗಾರ್ತಿ(ಬಿತ್ತಕ್ಕಿಯವಳು) ಕಳಸ, ಕನ್ನಡಿ, ಬಾಚಣಿಗೆ, ಚೀರಣಿಗೆಗಳ ಚಿತ್ರವಿರುತ್ತದೆ.

ಶಿವಮೊಗ್ಗ ಜಿಲ್ಲೆಯ ದೀವರ ಹಸಗರದ ಚಿತ್ತಾರ ತುಂಬ ಕಲಾತ್ಮಕವಾದದ್ದು. ಹಸಗರದ ಸುತ್ತಲಿನ ಚೌಕಟ್ಟನ್ನು 'ಪಪ್ಪಳ', 'ಅರೆಪಪ್ಪಳಿ' ಮುಂತಾದ ನಕ್ಷೆಗಳಿಂದ ಸಿಂಗರಿಸುತ್ತಾರೆ. ನಡುವೆ ಮದುಮಕ್ಕಳ ಚಿತ್ರ ಬರೆಯುತ್ತಾರೆ.

ರಾಯಚೂರಿನ ವೀರಶೈವರು ಹಸಗರ ಗೋಡೆಯ ಮೇಲೆ 'ಐರಾಣಿ ಕೊಡ', 'ದಂಡಿ', 'ಬಾಸಿಂಗ, ಸೂರ್ಯಚಂದ್ರರನ್ನು ಚಿತ್ರಿಸುತ್ತಾರೆ.

'ಹಸೆಮಣೆ' ಏರುವುದು ಎಂದರೆ ಮದುವೆ ಮಾಡಿಕೊಳ್ಳುವುದು ಎಂಬ ವಿಶೇಷ ಅರ್ಥವಿದೆ.'ಹಸೆಮಣೆ' ಎಂದರೆ ರಂಗೋಲಿ ಬರೆದ ಮಣೆ ಎಂದು ಅರ್ಥ. ಮದುಮಕ್ಕಳು ಈ ಮಣೆಯ ಮೇಲೆ ಕುಳಿತುಕೊಳ್ಳುತ್ತಾರೆ. ಇದರ ಮೇಲೆ ದಕ್ಷಿಣ ಕನ್ನಡದ ನಾಡವರು ತಾಳಿಯ ಚಿತ್ರವನ್ನೂ ಬರೆಯುತ್ತಾರೆ.

ಕಾಡುಗೊಲ್ಲರು ಕರಿ ಕಂಬಳಿಯ ಮೇಲೆ ಅಕ್ಕಿಯನ್ನು ತೆಳ್ಳಗೆ ಹರಡಿ ಬೆರಳಿನಿಂದ ಹಸೆ ಬರೆಯುತ್ತಾರೆ. ಇದನ್ನು 'ಹಸೆಯಕ್ಕಿ' ಎನ್ನುತ್ತಾರೆ ಹಸೆಯಕ್ಕಿಯ ಮೇಲೆ ಮಣೆಯಿಟ್ಟು ಮದುಮಕ್ಕಳನ್ನು ಮಣೆಯ ಮೇಲೆ ಕುಳ್ಳಿರಿಸುತ್ತಾರೆ. ಈ ಕಾರ್ಯವು ಹೆಣ್ಣು ಮತ್ತು ಗಂಡಿನ ಮನೆಯಲ್ಲಿ ಪ್ರತ್ಯೇಕವಾಗಿ ನಡೆಯುತ್ತದೆ. ಈ ಶಾಸ್ತ್ರವನ್ನು 'ಹಸೆ ಹಚ್ಚುವುದು' ಎನ್ನುತ್ತಾರೆ.

ಭಾರತ ಹಬ್ಬಗಳ ತವರು. ಹಬ್ಬಕ್ಕೂ ರಂಗೋಲಿಗೂ ಅಂಟಿದ ನಂಟು. ರಂಗೋಲಿಯಿಲ್ಲದ ಹಬ್ಬವೇ ಇಲ್ಲವೆಂದರೂ ಸಲ್ಲುವದು.

ದೇವರ ಮೂರ್ತಿಯನ್ನು ಪೂಜಿಸುವುದು ಭಕ್ತಿಯ ಒಂದು ಮಾರ್ಗ. ರಂಗೋಲಿಯು ದೇವರ ಮುಂದಿನ ಅಲಂಕಾರವಷ್ಟೇ ಅಲ್ಲ. ಸ್ವಯಂ ದೇವರೂ ಅಹುದು. ಲಕ್ಷ್ಮಿಯ ಪಾದ, ಗೋಪಾದ, ಕೃಷ್ಣನ ಪಾದಗಳನ್ನು ರಂಗೋಲಿಯಲ್ಲಿ ರಚಿಸಿ ಪೂಜಿಸುತ್ತಾರೆ. ಆಗ ಆಯಾ ದೇವರನ್ನು ಪೂಜಿಸಿದಂತೆ ಎಂದು ತಿಳಿಯುತ್ತಾರೆ. ರಥಸಪ್ತಮಿಯ ದಿನ ಜಾತ್ರೆಗೆ ಹೋಗಲಾಗದವರು ಮನೆಯಲ್ಲಿಯೇ ರಂಗೋಲಿಯ ರಥವನ್ನು ಬರೆದು ಪೂಜಿಸುತ್ತಾರೆ. ಇದರಿಂದ ಜಾತ್ರೆಗೆ ಹೋದ ಪುಣ್ಯಬರುತ್ತದೆಯೆಂದು ತಿಳಿಯುತ್ತಾರೆ. ನಾಗರ ಪಂಚಮಿಯ ದಿನ ರಂಗೋಲಿಯ ನಾಗವನ್ನು ಪೂಜಿಸಿದರೆ ಜೀವಂತನಾಗನನ್ನು ಪೂಜಿಸಿದ ಪುಣ್ಯ ಬರುತ್ತದೆಯೆಂಬ ನಂಬಿಕೆಯಿದೆ.


ಮಕರ ಸಂಕ್ರಾಂತಿಯು ಶೇಡಿಯ ಹಬ್ಬ. ಇದು ರಂಗೋಲಿಯ ಹಬ್ಬವೂ ಅಹುದು. ಈ ಸಂಕ್ರಾಂತಿಯನ್ನು ಕರಾವಳಿಯಲ್ಲಿ 'ಶೇಡಿ ಸಂಕ್ರಾತಿ'ಯೆಂದು ಕರೆಯುತ್ತಾರೆ. ಸಂಕ್ರಾಂತಿಗೆ ಮೂರು ನಾಲ್ಕು ದಿನಗಳಿರುವಾಗ ಇಲ್ಲಿಯ ಶೇಡಿ ಗಣಿಗಳಲ್ಲಿ ಶೇಡಿಯು ಉಕ್ಕುತ್ತದೆಯೆಂದು ಇವರ ಹೇಳಿಕೆ. ಶೇಡಿಯನ್ನು 'ಬುಧವಾರ' ದಿನ ಸಂಗ್ರಹಿಸುವುದು ಉತ್ತಮವೆನ್ನುತ್ತಾರೆ.

ಸಂಕ್ರಾಂತಿಯಂದು ಜಟಕ, ನಾಗ, ಬೀರ, ಮಾಸ್ತಿ ಮುಂತಾದ ದೇವರ 'ಹತ್ತು ಗುತ್ತು'ಗಳಿಗೆ, ಅಶ್ವತ್ಥಕಟ್ಟೆ, ಹಾಗೂ ನಾಗರ ಕಲ್ಲುಗಳಿಗೆ ನೀರಿನಲ್ಲಿ ಕದಡಿದ ಶೇಡಿಯನ್ನು ಹೊಯ್ಯುತ್ತಾರೆ. ಇದು ಸಂಕ್ರಾಂತಿಯಂದು ಆಯಾ ದೇವರ ಪೂಜೆಗೆ ಮುಂಚೆ ನಡೆಯಲೇ ಬೇಕಾದ ಕಾರ್ಯಕ್ರಮವಾಗಿದೆ. ಅಶ್ವತ್ಥ ಮರದ ಮೇಲೆ ಸತ್ತವರ ಭೂತ-ಪ್ರೇತಗಳು ನೆಲೆಸಿರುತ್ತವೆ; ಶೇಡಿಯನ್ನು ಚೆಲ್ಲುವುದರಿಂದ ಅವು ಸಂತೃಪ್ತಿ ಹೊಂದುತ್ತವೆ. ಮರದಿಂದ ಹೊರಬಂದು ಜನರಿಗೆ, ಸಾಕು ಪ್ರಾಣಿಗಳಿಗೆ, ಬೆಳೆಗಳಿಗೆ ತೊಂದರೆ ಕೊಡುವುದಿಲ್ಲವೆಂದು ತಿಳಿಯುತ್ತಾರೆ. ಹೆಣವನ್ನು ಹೊರಗಿನ ಭೂತಪ್ರೇತಗಳಿಂದ ರಕ್ಷಿಸುವ ಸಲುವಾಗಿ ಹೆಣದ ಸುತ್ತ ಶೇಡಿಯಿಂದ ಗೆರೆ ಎಳೆಯುವ ಸಂಪ್ರದಾಯವಿದೆ. ಬಿಳಿಬಣ್ಣವು ದುಷ್ಟಶಕ್ತಿಗಳಿಂದ ರಕ್ಷಣೆ ಕೊಡುತ್ತದೆ

ಎಂಬ ನಂಬಿಕೆಯು ಇದಕ್ಕೆ ಕಾರಣವಾಗಿದೆ. ಇದೇ ಕಾರಣಕ್ಕಾಗಿ ರಂಗೋಲಿಯ ಬಿಳಿಬಣ್ಣಕ್ಕೆ ಮಹತ್ವ ಬಂದಿದೆ. ಸಂಕ್ರಾಂತಿಯ ದಿನ, ಕರ್ನಾಟಕದ ಮನೆಮನೆಯ ಅಂಗಳದಲ್ಲಿ ದೇವರ ಬಳಿಯಲ್ಲಿ ವಿವಿಧ ರಂಗೋಲಿಗಳು ರಚನೆಗೊಳ್ಳುತ್ತವೆ.

'ಗೆಂಟಿ ಹುಣ್ಣಿವೆ' ಕಾರ ಹುಣ್ಣಿವೆಗಳು ದನಗಳ ಹಬ್ಬಗಳಾಗಿವೆ. ಗೆಂಟ ಹುಣ್ಣಿವೆಯಂದು ಕರಾವಳಿಯ ಹವ್ಯಕರು ಶೇಡಿಯಿಂದ ದನದ ಕೊಳಚಿನ (ಪಾದದ) ರಂಗೋಲಿಯನ್ನು ರಚಿಸುತ್ತಾರೆ. ಕೊಟ್ಟಿಗೆಯಿಂದ ಮನೆಯೊಳಗಿನ ದೇವರ ಕೋಣೆಯವರೆಗೆ ಕೊಳಚುಗಳ ಸಾಲು ರಚನೆಗೊಳ್ಳುತ್ತದೆ. 'ಇದು ಗೋಮಾತೆ' ಒಳಗೆ ಬಂದಿದೆಯೆಂಬುದನ್ನು ಸೂಚಿಸುತ್ತದೆ.






"ಕೊಳಚು" ಮಾದರಿಗಳು

ಎರಡೂ ಕೈಗಳನ್ನು ಮುಷ್ಟಿಕಟ್ಟಿ ಜೋಡಿಸಿ ನೀರು ಶೇಡಿಯಲ್ಲಿ ಮುಷ್ಟಿಗಳ ತಳಭಾಗವನ್ನು ಅದ್ದಿ ನೆಲಕ್ಕೆ ಊರಿದರೆ 'ಕೊಳಚು' ಸಿದ್ಧವಾಗುತ್ತದೆ. ಹತ್ತಿಯನ್ನು ಸುತ್ತಿದ ಸಣ್ಣ ಕುಂಚವನ್ನು ಬಣ್ಣದಲ್ಲಿ ಅದ್ದಿಕೊಂಡು ಕೊಳಚನ್ನು ಬರೆಯುವ ಕ್ರಮವೂ ಇದೆ. ಕೊಳಚನ್ನು ಬಿಳಿಬಣ್ಣದಿಂದ ಬರೆಯುತ್ತಾರೆ.

ಉತ್ತರ ಕರ್ನಾಟಕದಲ್ಲಿ ಕಾರ ಹುಣ್ಣಿವೆಯ ದಿನ ಕೊಟ್ಟಿಗೆಗೆ 'ಸುಣ್ಣಬಣ್ಣ' ಮಾಡಿ ಕೈ ಬೆರಳಿನಿಂದ ಬೊಟ್ಟು ರಂಗೋಲಿಯಿಡುತ್ತಾರೆ. ಸುಣ್ಣದಿಂದ ಎಳೆದ ಪಟ್ಟಿಯ ಬದಿಯಲ್ಲಿಯೇ ತುಸು ಅಂತರವನ್ನು ಬಿಟ್ಟು ಕೆಮ್ಮಣ್ಣಿನ ಪಟ್ಟಿಯನ್ನು ಎಳೆಯುತ್ತಾರೆ. ಸುಣ್ಣ ಹಾಗೂ ಬಣ್ಣದ ಪಟ್ಟಿಯ ನಡುವೆ ಸಗಣಿಯನ್ನು ಸಾರಿಸಿದ ತಿಳಿಹಸಿರು ಬಣ್ಣದ ಪಟ್ಟಿಯು ಎದ್ದು ಕಾಣುತ್ತದೆ. ತಿಳಿ ಹಸಿರು, ಬಿಳಿ, ಕೆಂಪು ಪಟ್ಟಿಗಳು ದೂರದಿಂದಲೇ ಕಣ್ಣಿಗೆ ಢಾಳಾಗಿ ಕಾಣಿಸುತ್ತವೆ.

ಶಿವಮೊಗ್ಗಾ ಜಿಲ್ಲೆಯ ದೀವರು ಭೂಮಿ ಹುಣ್ಣಿವೆಯನ್ನು ತುಂಬಾ ಸಂತೋಷದಿಂದ ಹಾಗೂ ಸಡಗರದಿಂದ ಆಚರಿಸುತ್ತಾರೆ. ಭೂಮಿತಾಯಿಯು ಪೈರನ್ನು ತುಂಬಿಕೊಂಡು ನಳನಳಿಸುತ್ತಿರುವಾಗ ಅವಳಿಗೆ ಬಯಕೆಯ ಊಟವನ್ನು ಬಡಿಸಲು ಸಿದ್ಧತೆ ನಡೆಯುತ್ತದೆ. ಮಹಿಳೆಯರು ರಾತ್ರಿಯಿಡೀ 'ಜಾಗರ ಕುಳಿತು' ನೂರೊಂದು ಬಗೆಯ ಹಸಿರು ಸೊಪ್ಪು ಹಾಗೂ ಬಸುರಿಯರ ಪ್ರೀತಿಯ ಅಡುಗೆಯಾದ ಅಂಬಲಿಯನ್ನು ತಯಾರಿಸುತ್ತಾರೆ. ಈ ಅಡುಗೆಯೇ ಹಚ್ಚಂಬ್ಲಿ. ಹಚ್ಚಂಬ್ಲಿಯನ್ನು ಒಯ್ಯಲು ವಿಶೇಷ ರೀತಿಯ ಚಿತ್ತಾರದ ಬುಟ್ಟಿಯನ್ನು ಇವರು ಈ ಮೊದಲೇ ಸಿದ್ಧವಾಗಿಟ್ಟಿರುತ್ತಾರೆ. ಇದೇ ಹಚ್ಚಂಬ್ಲಿ ಬುಟ್ಟಿ. ಹಚ್ಚಂಬ್ಲಿ ಬುಟ್ಟಿಯನ್ನು ಭೂಮಿ ಹುಣ್ಣಿವೆ ಬುಟ್ಟಿಯೆಂದೂ ಹೇಳುತ್ತಾರೆ.



ಹೂವಿನ ಬುಟ್ಟಿ

ಸಗಣಿಯನ್ನು ಸಾರಿಸಿದ ಬುಟ್ಟಿಗಳ ಹೊರಮೈಗೆ ಕೆಮ್ಮಣ್ಣು ಬಳಿದು ಅಕ್ಕಿಹಿಟ್ಟಿನಿಂದ'ಚಿತ್ತಾರ' ಮಾಡುತ್ತಾರೆ. ಬುಟ್ಟಿಯ ಮೇಲುಗಡೆಯ ಅಂಚಿಗೆ ಗೊಂಬೆ ಸಾಲು, ಮೆಂತೆಸಾಲು, ಮಗ್ಗೆ ಸಾಲು ಎಂಬ ಹೆಸರಿನ ಚಿತ್ತಾರ ಬಿಡಿಸುತ್ತಾರೆ. ನಡುವಿನ ಚೌಕುಗಳಲ್ಲಿ

ಕೃಷಿ ಕೆಲಸದ ಚಿತ್ರ, ಬೆಳೆಯ ಚಿತ್ರಗಳಿರುತ್ತವೆ. ಈ ಬುಟ್ಟಿಗಳ ಕಲಾಕುಸುರು ತುಂಬ ರಮ್ಯ.

ಹಬ್ಬಗಳಲ್ಲಿ ದೊಡ್ಡ ಹಬ್ಬವು ದೀಪಾವಳಿ. ಹಳ್ಳಿಗಳಲ್ಲಿ ಮನೆಯ ಗೋಡೆ, ಅಂಗಳಗಳು ರಂಗೋಲಿಯಿಂದ ತುಂಬಿಕೊಳ್ಳುತ್ತವೆ. ಪಟ್ಟಣಗಳಲ್ಲಿ ಅಂಗಡಿ ಸಾಲಿನ ರಸ್ತೆಗಳು ರಂಗೋಲಿಯಿಂದ ಅಲಂಕಾರಗೊಳ್ಳುತ್ತವೆ. ಕೃಷಿಕರು ದೀಪಾವಳಿಯನ್ನು ಮೂರು ದಿನ ಆಚರಿಸುತ್ತಾರೆ. ನರಕ ಚತುರ್ದಶಿಯ ಮುಂಚಿನ ದಿನ 'ನೀರು ತುಂಬುವ' ಹಬ್ಬ. ಇದನ್ನು'ಬೋರಜ್ಜಿಯ' ಹಬ್ಬ "ಕರಗೆ ಕುಳ್ಳಿಸುವ ಹಬ್ಬ" ಎಂದು ಕರಾವಳಿಯವರು ಕರೆಯುತ್ತಾರೆ. ಚಿಕ್ಕ ಬಾಯಿಯುಳ್ಳ ದುಂಡಗಿನ ಆಕಾರದ ಮಡಕೆಯೇ ಕರಗೆ, ಇದಕ್ಕೆ ಶೇಡಿ ಬಳಿದು ಜಾಂಜಿನಿಂದ ಎಳೆಯನ್ನು ಎಳೆದು ಅಲಂಕರಿಸುತ್ತಾರೆ. ಇವುಗಳನ್ನು ನಡುಮನೆಯಲ್ಲಿ ಭತ್ತದ ಹುಲ್ಲಿನ 'ಇರಿಕೆ'ಯ ಮೇಲೆ ಕುಳ್ಳಿರಿಸುತ್ತಾರೆ. ಒಂದು ಕರಗೆಯ ಮೇಲೆ ಮೊಗೆಕಾಯಿ ಇನ್ನೊಂದರ ಮೇಲೆ ಜುಟ್ಟುವುಳ್ಳ ತೆಂಗಿನಕಾಯಿಯನ್ನು ಇಡುತ್ತಾರೆ. ಮೊಗೆಕಾಯಿಗೆ ಕಾಡಿಗೆಯಿಂದ ಮುಖದ ಚಿತ್ತಾರ ಮಾಡುತ್ತಾರೆ. 'ಬೋರಜ್ಜಿ ಕರಗೆ'ಗಳು ಕುಳಿತಿರುವ ಗೋಡೆಗೆ ಹಸಗರದಷ್ಟೇ ದೊಡ್ಡದಾದ ರಂಗೋಲಿಯಿರುತ್ತದೆ. ಇದನ್ನು ಬೋರಜ್ಜಿ ಗೋಡೆಯೆನ್ನುತ್ತಾರೆ. ಬೋರಜ್ಜಿ ಗೋಡೆಯ ನಕ್ಷೆಯಲ್ಲಿ 'ಕಳಸ', 'ಸರಪಳಿ', 'ಚಿತ್ರಗಲ್ಲು' ಮುಂತಾದ ನಕ್ಷೆಗಳು ಇರುತ್ತವೆ. ನಡುವೆ ಅಶ್ವತ್ಥಮರವನ್ನು ಚಿತ್ರಿಸುತ್ತಾರೆ. ಅಶ್ವತ್ಥಮರದ ಕೆಳಗೆ ಕುಳಿತು ಬಲೀಂದ್ರನು ಭಕ್ತರು ಕೊಟ್ಟ ಬುತ್ತಿಯನ್ನು ಉಣ್ಣುತ್ತಾನೆ ಎಂದು ಜಾನಪದರು ಭಾವಿಸುತ್ತಾರೆ.

ಹೊಸ್ತಿಲಿಗೆ ನಿತ್ಯ ರಂಗೋಲಿಯನ್ನು ಬರೆಯಬೇಕೆಂಬ ಸಂಪ್ರದಾಯವು ಕೆಲವರಲ್ಲಿದೆ. ಹಬ್ಬದ ದಿನಗಳಲ್ಲಿ ವಿಶೇಷ ರಂಗೋಲಿಯನ್ನು ಹೊಸ್ತಿಲ ಮೇಲೆ ಬರೆಯುತ್ತಾರೆ.


ಕರ್ನಾಟಕದ ಯಾವ ಭಾಗಕ್ಕೆ ಹೋಗಿ ನೋಡಿದರೂ ಹೊಸ್ತಿಲ ರಂಗೋಲಿಯಲ್ಲಿ ಜೋಡು ತರಂಗಿತ ರೇಖೆಗಳು ಕಾಣುತ್ತವೆ. ಈ ತರಂಗಿತ ರೇಖೆಗಳ ಎಡಬಲಕ್ಕೆ ಜೋಡು ನೇರ ರೇಖೆಗಳಿರುತ್ತವೆ. ತರಂಗಿತ ರೇಖೆಗಳು ನಾಗದ ನಡಿಗೆಯಂತೆ ಇರುತ್ತವೆ. ಆದ್ದರಿಂದ ಇವು ನಾಗದ ಚಿನ್ಹೆಗಳೆಂದು ತಿಳಿದವರು ಹೇಳುತ್ತಾರೆ. ನಾಗರ ಪಂಚಮಿಯ ದಿನ ನಾಗರು ಒಳಗೆ ಬಂದಂತೆ ಮಾರನೆಯ ದಿನ ನಾಗರು ಹೊರಗೆ ಹೋದಂತೆ ಹೊಸ್ತಿಲ ಮೇಲೆ

ರಂಗೋಲಿಯಿಡುತ್ತಾರೆ. ಹೊಸ್ತಿಲ ಮೇಲೆ ಎರಡು ನೇರ ಗೆರೆಗಳ ಬದಲಿಗೆ ಹೆಚ್ಚು ಸಂಖ್ಯೆಯಲ್ಲಿ ಗೆರೆಗಳನ್ನು ಎಳೆಯುವುದುಂಟು. ಉಡುಪಿಯ ಸುತ್ತಲಿನ ಹಳ್ಳಿಯ ಜನರು ಹೊಸ್ತಿಲ ತುಂಬ ರಂಗೋಲಿ ಎಳೆಯುವುದು ಕಡಿಮೆ. ಹೊಸ್ತಿಲ ನಡುವೆ ಹಾಗೂ ಹೊಸ್ತಿಲ ತೀರಾ ಎಡಕ್ಕೆ ಮತ್ತು ಬಲಕ್ಕೆ ಹೀಗೆ ಮೂರು ಕಡೆ ಮಾತ್ರ ರಂಗೋಲಿ ಇಡುತ್ತಾರೆ. ಹೊಸ್ತಿಲ ತುಂಬಾ ರಂಗೋಲಿ ಹಾಕಿದರೆ ಹೆಣ್ಣು ಹುಟ್ಟುತ್ತದೆ. ಹೆಣ್ಣು ಮಕ್ಕಳು ಬೇಕು ಎನಿಸಿದಾಗ ನಿತ್ಯ ಹೊಸ್ತಿಲ ತುಂಬಾ ರಂಗೋಲಿ ಹಾಕಬೇಕು.

ಹೊಸ್ತಿಲ ರಂಗೋಲಿ ಬರೆಯುವಾಗ ಬೆಕ್ಕು ಒಳಗೆ ಹೊರಗೆ ದಾಟಬಾರದು ಮುಂತಾದ ನಂಬಿಕೆಗಳು ಉಡುಪಿ ಕಡೆಯಲ್ಲಿ ರೂಢಿಯಲ್ಲಿವೆ. ಇಲ್ಲಿಯ ಬ್ರಾಹ್ಮಣ ಮಹಿಳೆಯರು 'ಹೊಸ್ತಿಲಜ್ಜಿ' ಎಂಬ ದೇವರು ಹೊಸ್ತಿನ ಬಳಿ ಇರುತ್ತಾಳೆಂದು ತಿಳಿಯುತ್ತಾರೆ. ಇವರು ಶ್ರಾವಣ ಮಾಸದಲ್ಲಿ ಹೊಸ್ತಿಲಜ್ಜಿಯನ್ನು ಕರೆಯುವ ಹಾಗೂ ಕಳಿಸುವ ಹಬ್ಬವನ್ನು ಆಚರಿಸುತ್ತಾರೆ. ಆಗ ಹೊಸ್ತಿಲ ಮೇಲೆ ವಿಶೇಷ ರೀತಿಯ ರಂಗೋಲಿ ಇರುತ್ತದೆ. ಶ್ರಾವಣ ಮಾಸದ ಶನಿವಾರ ಹಾಗೂ ಸೋಮವಾರ ಕರಾವಳಿಯವರು ಹೊಸ್ತಿಲಿಗೆ ವಿಶೇಷ ರಂಗೋಲಿ ಮಾಡುತ್ತಾರೆ.

ಶ್ರಾವಣ ಮಾಸದಲ್ಲಿ 'ಸೊಣೆ ಗಿಡ'ವೆಂಬ ಚಿಕ್ಕ ಗಿಡ ಹೂ ಬಿಡುತ್ತದೆ. ಸೊಣೆ ಗಿಡದ ಚಿಗುರು, ಗರಿಕೆ, ಹೂ, ಕುಂಕುಮಗಳನ್ನು ಶ್ರಾವಣಮಾಸದಲ್ಲಿ ಹೊಸ್ತಿಲ ರಂಗೋಲಿಗೆ ಅರ್ಪಿಸುತ್ತಾರೆ. ಉತ್ತರ ಕರ್ನಾಟಕದ ಬೆಳಗಾಂ ಕಡೆಯ ಜನರು ಹೊಸ್ತಿಲಿಗೆ 'ಕುದುರೆನಾಲು' ಇರುವದು ಶುಭವೆಂದು ತಿಳಿಯುತ್ತಾರೆ. ಆದ್ದರಿಂದ ಕಬ್ಬಿಣದ ಕುದುರೆಯ ನಾಲನ್ನು ಇವರು ಹೊಸ್ತಿಲ ಮೇಲೆ ಹುಗಿದು ಕೂಡ್ರಿಸುತ್ತಾರೆ. ಆದ್ದರಿಂದ 'ನಾಲು' ಇಲ್ಲದ ಹೊಸ್ತಿಲ ಮೇಲೆ ರಂಗೋಲಿಯ 'ನಾಲು' ಇರುವುದನ್ನು ಈ ಭಾಗದ ಹೊಸ್ತಿಲ ರಂಗೋಲಿಯಲ್ಲಿ ಕಾಣುತ್ತೇವೆ. ಉತ್ತರ ಕನ್ನಡದ ಹವ್ಯಕರ ಹೊಸ್ತಿಲ ರಂಗೋಲಿಯಲ್ಲಿ ಸಿಂಗಾರಕ್ಕೆ ಹೆಚ್ಚು ಪ್ರಾಶಸ್ತ್ಯವಿದೆ. ಅಡಕೆಯ ಎಳೆಯ ಹೂವೇ 'ಸಿಂಗಾರ'. ಸಿಂಗಾರವು ಸ್ತ್ರೀ ದೇವರ ಪ್ರೀತಿಯ ಹೂವು. ಹವ್ಯಕರು ಹೊಸ್ತಿಲ ಗೋಡೆಗೆ ಹೆಚ್ಚು ಮಹತ್ವ ಕೊಡುತ್ತಾರೆ. ಹೊಸ್ತಿಲ ಗೋಡೆಗೆ ಕೆಂಪು ಬಣ್ಣ ಬಳಿದು ಬಿಳಿಬಣ್ಣದಿಂದ 'ಸಿಂಗಾರ' ಬಿಡಿಸುತ್ತಾರೆ. ನೆಣೆಯ ಕುಂಚವನ್ನು ಬಳಸುತ್ತಾರೆ. ಆದರೆ ಹೊಸ್ತಿಲಿಗೆ ಎಡಬಲದಲ್ಲಿ ನಾಲ್ಕು ಗೆರೆ ಎಳೆದು ಕುಂಕುಮ ಹಾಕಿ ಮುಗಿಸುತ್ತಾರೆ.





ಹೊಸ್ತಿಲ ರಂಗೋಲಿಗಳು

ಧಾರ್ಮಿಕ ಹಬ್ಬ ಹಾಗೂ ಮಂಗಳ ಕಾರ್ಯಗಳಲ್ಲಿ ಆರತಿ ಮಾಡುವ ಸಂಪ್ರದಾಯವಿದೆ. ಆರತಿ ತಟ್ಟೆಯನ್ನು ಕೂಡ ರಂಗೋಲಿಯಿಂದ ಅಲಂಕರಿಸುತ್ತಾರೆ.

ಕಂಚು ಅಥವಾ ಹಿತ್ತಾಳೆಯ ಹರಿವಾಣವನ್ನು ಬಂಗಾರದ ಬಣ್ಣ ಬರುವಂತೆ ತಿಕ್ಕಿ ತೊಳೆದುಕೊಳ್ಳಬೇಕು. ಚೆನ್ನಾಗಿ ಒರೆಸಿಕೊಂಡ ಮೇಲೆ ನೆಣೆಯ ತುದಿಯನ್ನು ಜೇನುತುಪ್ಪ ಅಥವಾ ಎಣ್ಣೆಯಲ್ಲಿ ಅದ್ದಿಕೊಂಡು ಹರಿವಾಣದಲ್ಲಿ ತಮಗಿಷ್ಟವಾದ ರಂಗೋಲಿಯನ್ನು ರಚಿಸಬೇಕು. ಬಳಿಕ ಕುಂಕುಮ ಅರಿಶಿನ ಪುಡಿಗಳನ್ನು ಆಯಾ ಸ್ಥಾನದಲ್ಲಿ ಮೆಲ್ಲಗೆ ಉದುರಿಸಬೇಕು. ಅನಾವಶ್ಯಕ ಬಣ್ಣವನ್ನು ಮೆಲ್ಲಗೆ ಬಟ್ಟೆಯಿಂದ ಒರೆಸಿ ಹೊರತೆಗೆಯಬೇಕು. ಬಣ್ಣದ ಬದಲಿಗೆ ಕಸಕಸೆ, ಸಾಸಿವೆ, ರವೆ ಇತ್ಯಾದಿ ಸಣ್ಣ ಶರೀರದ ಧಾನ್ಯವನ್ನು ಉದುರಿಸಬಹುದು. ಹರಿವಾಣವನ್ನು ಅತ್ತ ಇತ್ತ ಅಲ್ಲಾಡಿಸಿದಾಗ ಎಣ್ಣೆ ಅಥವಾ ಜೇನುತುಪ್ಪವು ಅಂಟಿದ ಭಾಗಕ್ಕೆ ಧಾನ್ಯವು ಅಂಟಿಕೊಳ್ಳುತ್ತದೆ. ಹರಿವಾಣದಲ್ಲಿ ಧಾನ್ಯದ ರಂಗೋಲಿ ಸಿದ್ಧವಾಗುತ್ತದೆ. ಇತ್ತೀಚಿನವರು ಎಣ್ಣೆ, ಜೇನುತುಪ್ಪದ ಬದಲಿಗೆ ಉತ್ತಮ ಜಾಲೆಯ ಅಂಟನ್ನು ಬಳಸುತ್ತಿದ್ದಾರೆ. ಅಂಟು ಒಣಗಿದಾಗ ಬಣ್ಣ ಅಥವಾ ಧಾನ್ಯ ಗಟ್ಟಿಯಾಗಿ ಅಂಟಿಕೊಳ್ಳುತ್ತದೆ. ರಂಗೋಲಿಯು ಹೆಚ್ಚು


ಕಾಲ ಬಾಳುತ್ತದೆ. ಅಂಟು ಬೇಗನೆ ಒಣಗುವ ಕಾರಣ ಒಂದು ಭಾಗದ ರಂಗೋಲಿ ಮುಗಿದ ಮೇಲೆ ಮುಂದಿನ ಭಾಗದ ರಂಗೋಲಿಯನ್ನು ಕೈಗೆತ್ತಿಕೊಳ್ಳಬೇಕು. ಹರಿವಾಣದ ರಂಗೋಲಿಗಾಗಿ ತೆಂಗಿನ ಗರಿಯ ಕಡ್ಡಿ, ಕರಡದ ಕಡ್ಡಿ, ಬೆಂಕಿ ಕಡ್ಡಿಗಳನ್ನೂ ಹಲವು ಬಗೆಯ ಬೀಜಗಳನ್ನು ಬಳಸುತ್ತಾರೆ. ಪ್ರಾಣಿ, ಪಕ್ಷಿ, ಲಕ್ಷ್ಮಿ, ಸರಸ್ವತಿ, ಬಾಲಕೃಷ್ಣ, ಶಂಖ, ಚಕ್ರ ಮುಂತಾದವುಗಳನ್ನು ರಚಿಸುತ್ತಾರೆ. ಕರಾವಳಿಯಲ್ಲಿ ಗಣೇಶ ಚೌತಿಯ ಹೊತ್ತಿಗೆ ರಂಗೋಲಿ ಸ್ಪರ್ಧೆಗಳನ್ನು ಏರ್ಪಡಿಸಿ ಆರತಿ ತಟ್ಟೆಯ ರಂಗೋಲಿಯನ್ನು ಪ್ರೋತ್ಸಾಹಿಸಲಾಗುತ್ತದೆ.

ರಂಗೋಲಿಯನ್ನು ರಚಿಸುವ ರೀತಿಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಮುಖ್ಯವಾಗಿ ಎರಡು ರೀತಿಗಳು ಕಂಡು ಬರುತ್ತವೆ. ಒಂದು ಗೆರೆಯ ವಿಧಾನ ಇನ್ನೊಂದು ಚುಕ್ಕೆ ಅಥವಾ ಬೊಟ್ಟು ವಿಧಾನ.

ಗೆರೆಯ ವಿಧಾನವು ಕರ್ನಾಟಕ, ತಮಿಳುನಾಡು, ರಾಜಸ್ಥಾನ, ಬಂಗಾಲ ಮುಂತಾದ ರಾಜ್ಯಗಳಲ್ಲಿ ಬಳಕೆಯಲ್ಲಿದೆ. ಚುಕ್ಕೆ ಅಥವಾ ಬೊಟ್ಟುಗಳನ್ನು ಅಲಂಕಾರಕ್ಕಾಗಿ ಗೆರೆ ರಂಗೋಲಿಯ ಜೊತೆ ಬಳಸುತ್ತಾರೆ. ಆದರೆ ಚುಕ್ಕೆಯೇ ಇಲ್ಲಿ ಮುಖ್ಯವಲ್ಲ.

ಗೆರೆಗಳು ಓರೆಯಾಗಿರಬಹುದು, ಅಡ್ಡ ಹಾಗೂ ನೇರವಾಗಿರಬಹುದು. ಸುಳಿಯುವ, ಸುತ್ತುವ ಗೆರೆಗಳಾಗಿರಬಹುದು. ರಂಗೋಲಿಕಾರರು, ಗೆರೆಗಳನ್ನು ಎಳೆಯಲು ಅಳತೆಯ ಪಟ್ಟಿಯನ್ನು ಬಳಸುವುದಿಲ್ಲ. ಹಸಗರದ ರಂಗೋಲಿ, ಬಾಗಿಲ ಸುತ್ತಲಿನ ರಂಗೋಲಿಗಳನ್ನು ಬಿಡಿಸುವಾಗ ಹೊರಗಿನ ದೊಡ್ಡ ಗೆರೆಗಳನ್ನು ಎಳೆಯಲು ಬಣ್ಣ ಬಳಿದ ದಾರವನ್ನು ಬಳಸುತ್ತಾರೆ.


ಸ್ವಸ್ತಿಕ, ಗಣಪತಿ ಮಂಡಲ, ಸೀತೆಮುಡಿ, ಸಿಂಗಾರ, ಅಶ್ವತ್ಥಮರದ ರಂಗೋಲಿಯಲ್ಲಿ ಗೆರೆಯೇ ಮುಖ್ಯ. ಹಸಗರದ ರಂಗೋಲಿಗಳಲ್ಲಿಯ ಗಿಂಡಿ, ಕಂಬಿ, ಸರಪಳಿಗಳು ಗೆರೆಯ ರಂಗೋಲಿಗಳಾಗಿವೆ. ತಮಿಳು ನಾಡಿನ 'ಕೋಲಂ'(ರಂಗೋಲಿ)ಗಳಲ್ಲಿ ಗೆರೆಗಳನ್ನು ಜೋಡಿಸುತ್ತ ರಂಗೋಲಿ ರಚಿಸುವುದನ್ನು ಕಾಣಬಹುದು. ಕರ್ನಾಟಕ ಬಂಗಾಲಗಳಲ್ಲಿ ಕೆಲವೇ ಗೆರೆಗಳಿಂದ ಮನುಷ್ಯರ ಚಿತ್ರಗಳನ್ನು ರಚಿಸುತ್ತಾರೆ. ಕರ್ನಾಟಕದ ಹಾಲಕ್ಕಿ ಒಕ್ಕಲಿಗರು, ಗಾಮೊಕ್ಕಲಿಗರು ದೀವರು ಇಂಥ ಚಿತ್ರಗಳನ್ನು ರಚಿಸುತ್ತಾರೆ.



ಅಷ್ಟದಳ




ಸ್ವಸ್ತಿಕ



ಗಣಪತಿ ಮಂಡಲ

ಆದಿಮಾನವರು ಕಲ್ಲಿನ ಗುಹೆಗಳಲ್ಲಿ ವಾಸಿಸುತ್ತಿದ್ದರು. ಅವರು ತಾವು ವಾಸಿಸುತ್ತಿದ್ದ ಗುಹೆಗಳ ಗೋಡೆಯ ಮೇಲೆ ರಚಿಸಿದ ಚಿತ್ರಗಳು ರಂಗೋಲಿಯ ಚಿತ್ರಗಳನ್ನು ಹೋಲುತ್ತವೆ. ಉದ್ದುದ್ದವಾದ ಕೈಕಾಲುಗಳು, ವಿವರವನ್ನು ತೋರಿಸದ ಮುಖ, ದೇಹ ಇವು ಆದಿಮಾನವರ ಚಿತ್ರಗಳಲ್ಲಿ ಕಂಡುಬರುವ ಮುಖ್ಯ ಅಂಶಗಳು, ಜಾನಪದರ ಗೆರೆ ಚಿತ್ರಗಳು ಕೂಡ ಇವೇ ಲಕ್ಷಣಗಳನ್ನು ಹೊಂದಿರುತ್ತವೆ. ಆದರೂ ಈ ಚಿತ್ರಗಳ ನಿಲುವು ಕೈಗಳ ಭಂಗಿ, ಅವುಗಳ ಭಾವವನ್ನೂ, ಕ್ರಿಯೆಯನ್ನು ತಿಳಿಸುವಲ್ಲಿ ಸೋಲುವುದಿಲ್ಲ.



ಸುಗ್ಗಿ ಕುಣಿತ

ಚುಕ್ಕೆ ರಂಗೋಲಿಯಲ್ಲಿ ಚುಕ್ಕೆ ಅಥವಾ ಚುಕ್ಕೆಗಳ ಸಮೂಹಗಳು ರಂಗೋಲಿಯಾಗುತ್ತವೆ. ಚುಕ್ಕೆಗಳನ್ನು ಸುಣ್ಣದ ಕಡುವಿನಿಂದಾಗಲೀ ಪುಡಿಬಣ್ಣದಿಂದಾಗಲೀ

ರಚಿಸುತ್ತಾರೆ. ನೀರುಬಣ್ಣದಿಂದ ಚುಕ್ಕೆಗಳನ್ನಿಟ್ಟಾಗ ಅವುಗಳನ್ನು 'ಬೊಟ್ಟು', 'ಹುಂಡು' ಎನ್ನುತ್ತಾರೆ. ಚುಕ್ಕೆಗಳನ್ನು ನೆಲದ ಮೇಲೆ ಹಾಗೂ ಬೊಟ್ಟುಗಳನ್ನು ಗೋಡೆ, ಕೊಡ ಹಾಗೂ ಪೂಜಾ ಸಾಮಗ್ರಿಗಳ ಮೇಲೆ ಇಡುತ್ತಾರೆ. ಚುಕ್ಕೆ ಅಥವಾ ಬೊಟ್ಟುಗಳು ಸಂದರ್ಭಕ್ಕೆ ತಕ್ಕಂತೆ ಒಂದು, ಎರಡು, ನಾಲ್ಕು, ಐದು ಇರುತ್ತವೆ.


ಕಾಡುಗೊಲ್ಲರು ಹೆಣ್ಣು ನೋಡುವ ಹಾಗೂ ಒಪ್ಪುವ ಶಾಸ್ತ್ರ ಮಾಡಲು ಹೋಗುವಾಗ ಒಯ್ಯುವ ಕರಗೆಗೆ ಬಿಳಿಬಣ್ಣದ ಒಂದು ಬೊಟ್ಟು ಇಟ್ಟುಕೊಂಡು ಹೊರಡುತ್ತಾರೆ. ಐದು ಬೆರಳುಗಳನ್ನು ಬಣ್ಣದಲ್ಲಿ ಅದ್ದಿ ಫಲಕದ ಮೇಲೆ ಊರಿದಾಗ ಮೂಡುವ ರಂಗೋಲಿಯು ಹೂವಿನಂತೆ ಶೋಭಿಸುತ್ತದೆ. 'ಹೊಸತು' ಹಬ್ಬದಲ್ಲಿ ಅಕ್ಕಿಮಡಕೆಯ ಮೇಲೆ ಇಂಥ ರಂಗೋಲಿಯಿರುತ್ತದೆ.

ಚುಕ್ಕೆಗಳನ್ನು ಆಧಾರ ಗುರುತುಗಳಾಗಿ ಇಟ್ಟುಕೊಂಡು ರಂಗೋಲಿ ರಚಿಸುವುದು ಇನ್ನೊಂದು ಕ್ರಮ. ಈ ರೀತಿಯ ರಂಗೋಲಿಯನ್ನು ಹೊಸ ಪೀಳಿಗೆಯವರು ಹೆಚ್ಚು ಮೆಚ್ಚುತ್ತಾರೆ. ಶಾಲೆ ಕಾಲೇಜುಗಳಲ್ಲಿ ಹಾಗೂ ಸಾರ್ವಜನಿಕ ಸಮಾರಂಭಗಳಲ್ಲಿ ರಂಗೋಲಿ ಸ್ಪರ್ಧೆ ಹಾಗೂ ಪ್ರದರ್ಶನಗಳು ನಡೆಯುವಾಗ ಚುಕ್ಕೆ ರಂಗೋಲಿಗೆ ಹೆಚ್ಚಿನ ಸ್ಥಾನ ದೊರೆಯುತ್ತದೆ. ಆಂಧ್ರ ಪ್ರದೇಶದಲ್ಲಿ ಚುಕ್ಕೆ ರಂಗೋಲಿಯು ಜನಪ್ರಿಯ ಕಲೆಯಾಗಿದೆ. ಚುಕ್ಕೆ ರಂಗೋಲಿಯನ್ನು ಅವರು'ಮುತ್ಯಾಲ ಮುಗ್ಗುಲು' ಎಂದು ಕರೆಯುತ್ತಾರೆ. 'ಮುತ್ಯಾಲು' ಎಂದರೆ ಮುತ್ತು, 'ಮುಗ್ಗುಲು' ಎಂದರೆ ರಂಗೋಲಿ.

ಚುಕ್ಕೆ ರಂಗೋಲಿಯಲ್ಲಿ ಬಣ್ಣ ತುಂಬುವ ರಂಗೋಲಿ ಹಾಗೂ ಬಣ್ಣ ತುಂಬದ ರಂಗೋಲಿ ಎಂದು ಎರಡು ನಮೂನೆಗಳನ್ನು ಗುರುತಿಸಬಹುದು. ಬಣ್ಣ ತುಂಬುವುದು ಹಾಗೂ ತುಂಬದೇ ಇರುವುದು ಅವರವರ ಇಷ್ಟವನ್ನು ಅವಲಂಬಿಸಿರುತ್ತದೆ. ವಿಶೇಷ ಸಂದರ್ಭಗಳಲ್ಲಿ ಮಾತ್ರ ಬಣ್ಣ ತುಂಬಿ ಅಂದಗೊಳಿಸುತ್ತಾರೆ.


ಚುಕ್ಕೆ ರಂಗೋಲಿಯು ಗೆರೆ ರಂಗೋಲಿಗಿಂತ ಸುಲಭವಾಗಿದೆ. ಆಯಾ ರಂಗೋಲಿಗಿರುವ ಚುಕ್ಕೆಗಳ ಸಂಖ್ಯೆಯನ್ನು ನೆನಪಿಟ್ಟುಕೊಂಡರೆ ಸಾಕು.

ಬಿಲ್ವಪತ್ರೆಯನ್ನು ರಚಿಸುವಾಗ ಮೊದಲು ಐದು ಚುಕ್ಕಿಗಳನ್ನು ಸಾಲಾಗಿ ಇಡಬೇಕು. ಬಳಿಕ ಎರಡೂ ಮಗ್ಗಲು ಎರಡರಂತೆ ಚುಕ್ಕಿಗಳನ್ನು ಕಡಿಮೆ ಮಾಡಬೇಕು. ಕೊನೆಗೆ ಒಂದೊಂದು ಚುಕ್ಕಿಯಾದಾಗ ನಿಲ್ಲಿಸಿ ಚುಕ್ಕಿಗಳನ್ನು ಕೂಡಿಸಬೇಕು.



ಬಿಲ್ಪಪತ್ರೆ

ಕೂರ್ಮವನ್ನು ರಚಿಸುವಾಗ ನಡುವೆ ಹದಿನೈದು ಚುಕ್ಕಿಗಳನ್ನು ಇಟ್ಟುಕೊಳ್ಳಬೇಕು. ಎರಡೂ ಮಗ್ಗಲು ಎಂಟು ಚುಕ್ಕಿಗಳಾಗುವಾಗ ಚುಕ್ಕಿ ಹಾಕುವುದನ್ನು ನಿಲ್ಲಿಸಬೇಕು. ರಂಗೋಲಿಗೆ ಬಣ್ಣ ಹಾಕುವ ವಿಚಾರವಿದ್ದಾಗ ಒಂದೇ ಗೆರೆಯನ್ನು ಎಳೆದುಕೊಳ್ಳಬಹುದು. ಗೆರೆಗಳನ್ನು ಹಾಗೂ ಚುಕ್ಕಿಗಳನ್ನು ಪುಡಿಬಣ್ಣ ಅಥವಾ ನೀರುಬಣ್ಣದಿಂದ ರಚಿಸಬಹುದು. ಬಟ್ಟೆಯ ಕುಂಚವನ್ನು ಬಳಸಿ ಎರಡು ಬೆರಳುಗಳಿಂದ ರಂಗೋಲಿಯ ಗೆರೆ ಎಳೆದರೆ ಜೋಡುಗತಿಗಳು ಮೂಡುತ್ತವೆ. ಚುಕ್ಕಿಗಳನ್ನು ನೇರ, ಅಡ್ಡ, ಉದ್ದವಾಗಿರುವ ಸರಳಗೆರೆಗಳಿಂದ ಕೂಡಿಸುವುದು ಒಂದು ಕ್ರಮ. ಬಿಲ್ವಪತ್ರೆ, ಕೂರ್ಮದ ಒಳಭಾಗ ಮುಂತಾದವು ಈ ಕ್ರಮಕ್ಕೆ ಉದಾಹರಣೆಗಳು. ಚುಕ್ಕಿಗಳನ್ನು ಬಾಗುವ ಗೆರೆಗಳಿಂದ ಕೂಡಿಸುವುದು ಇನ್ನೊಂದು ಕ್ರಮ. ಹುಲಿಯುಗುರನ್ನು ಮೂರರಿಂದ ಎರಡಕ್ಕೆ ಇಳಿಸುವ ಕ್ರಮದಲ್ಲಿ ಚುಕ್ಕೆ ಹಾಕಿ ಬಗ್ಗುವ ಗೆರೆಗಳಿಂದ ಚುಕ್ಕಿಗಳನ್ನು ಕೂಡಿಸುತ್ತಾರೆ. ಯಜ್ಞೇಶ್ವರನ ನಾಲಿಗೆ, ಕಡಹಾಗಲು, ರಾಮನ ತೊಟ್ಟಿಲುಗಳನ್ನು ರಚಿಸುವಾಗ ಸರಳ ಹಾಗೂ ಬಗ್ಗಿದ ರೇಖೆಗಳೆರಡನ್ನೂ ಬಳಸುತ್ತಾರೆ.



ಯಜ್ಞೇಶ್ವರನ ನಾಲಿಗೆ

ಚುಕ್ಕೆಗಳ ಸುತ್ತ ಸುತ್ತುವ ರೇಖೆಗಳನ್ನು ಎಳೆಯುವುದು ಮತ್ತೊಂದು ಕ್ರಮ. ಅಂಗಳದಲ್ಲಿ ಇಂಥ ರಂಗೋಲಿಗಳಿರುತ್ತವೆ.

ರಂಗೋಲಿ ನಮ್ಮ ದೇಶದ ರಾಷ್ಟ್ರೀಯ ಚಿತ್ರಕಲೆ. ಇದರಲ್ಲಿ ನಮ್ಮ ದೇಶದ ಸಂಸ್ಕೃತಿ ಹಾಸುಹೊಕ್ಕಾಗಿದೆ. ನಮ್ಮ ಹಿರಿಯರು ಉಳಿಸುಕೊಂಡು ಬಂದ ಈ ಕಲಾ ಸಂಪತ್ತನ್ನು ಮುಂದಿನವರಿಗಾಗಿ ಉಳಿಸಿಕೊಳ್ಳುವ ಹೊಣೆ ನಮ್ಮೆಲ್ಲರದ್ದಾಗಿದೆ.

ಕನ್ನಡ ವಿಶ್ವವಿದ್ಯಾಲಯವು ನವಸಾಕ್ಷರರಿಗೆ ಮತ್ತು ಪ್ರಾಥಮಿಕ ಹಂತದಿಂದ ಪದವಿ ಮಟ್ಟದವರೆಗೆ ಉತ್ತಮ ಹಾಗೂ ಉಪಯುಕ್ತವಾದ ಪಠ್ಯಪುಸ್ತಕಗಳನ್ನು ನಿರ್ಮಾಣ ಮಾಡುವ ಸಲುವಾಗಿ 'ಪಠ್ಯಪುಸ್ತಕ ರಚನಾ ವಿಭಾಗ'ವನ್ನು ತೆರೆದಿದೆ. ಇದರ ಮೊದಲ ಪ್ರಯತ್ನವಾಗಿ ನವಸಾಕ್ಷರರಿಗಾಗಿ ಪಠ್ಯಪುಸ್ತಕ ರಚನೆ ಮಾಡಬೇಕೆಂದು ಚಿಂತಿಸುತ್ತಿರುವಾಗ ಬೆಂಬಲಕ್ಕೆ ಬಂದುದು ಲೋಕ ಶಿಕ್ಷಣ ಇಲಾಖೆ. ನವಸಾಕ್ಷರರಿಗಾಗಿ ಪುಸ್ತಕ ಬರೆಸುವ ತಮ್ಮಲ್ಲಿದ್ದ ಯೋಜನೆಯನ್ನು ಅವರು ನಮ್ಮ ವಿಶ್ವವಿದ್ಯಾಲಯಕ್ಕೆ ವಹಿಸಿಕೊಟ್ಟರು. ವಿಶ್ವವಿದ್ಯಾಲಯವು ಈ ಯೋಜನೆಯನ್ನು ಸಂತಸದಿಂದ ಸ್ವೀಕರಿಸಿ, ಕೂಡಲೇ ನಾಡಿನ ಪ್ರಖ್ಯಾತ ಲೇಖಕರನ್ನು, ಭಾಷಾತಜ್ಞರನ್ನು, ಶಿಕ್ಷಣತಜ್ಞರನ್ನು ಒಳಗೊಂಡಂತೆ ಸಲಹಾ ಸಮಿತಿಯನ್ನು ರಚಿಸಿ, ಅವರೆಲ್ಲರ ಅಭಿಪ್ರಾಯ, ಸಲಹೆ, ಸಹಕಾರಗಳನ್ನು ಕೇಳಿ ಕಾರ್ಯೋನ್ಮುಖವಾಯಿತು. ಪುಸ್ತಕಗಳ ವಸ್ತು, ಭಾಷೆ, ಮುದ್ರಣ ವಿನ್ಯಾಸ, ಚಿತ್ರಗಳ ಮಹತ್ವ, ಸಾಹಿತ್ಯಕ ಗುಣಮಟ್ಟ ಇತ್ಯಾದಿಗಳನ್ನು ಕುರಿತು ಸಮಿತಿಯು ಅನೇಕ ಸಲ ಚರ್ಚಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲು ಸೂಚಿಸಿತು.

ನವಸಾಕ್ಷರರಿಗಾಗಿ ಕನ್ನಡದಲ್ಲಿ ಹಾಗೂ ದೇಶದ ಇತರ ಭಾಷೆಗಳಲ್ಲಿ ಈಗಾಗಲೇ ಪ್ರಕಟವಾಗಿರುವ ಪುಸ್ತಕಗಳನ್ನೆಲ್ಲ ಒಟ್ಟುಗೂಡಿಸಿ, ಅವುಗಳ ಮಾದರಿ, ಮಾಹಿತಿಗಳನ್ನೆಲ್ಲ ಭಾಷಾತಜ್ಞರಿಂದ ಪರಿಶೀಲಿಸಲಾಯಿತು. ಜೊತೆಗೆ ಈ ಕ್ಷೇತ್ರದ ಅನುಭವಿ ಕ್ಷೇತ್ರಸಹಾಯಕರನ್ನು ನೇಮಿಸಿಕೊಂಡು ಅವರಿಗೆ ಕಮ್ಮಟಗಳನ್ನು ನಡೆಸಿ, ಪ್ರಶ್ನಾವಳಿ ತಯಾರಿಸಿಕೊಟ್ಟು, ಅವರನ್ನು ರಾಜ್ಯದಾದ್ಯಂತ ಆಯ್ದ ಜಿಲ್ಲೆ, ತಾಲೂಕುಗಳಿಗೆ ಕಳುಹಿಸಿ ಈ ಆಂದೋಲನದಲ್ಲಿ ಕಲಿತವರಿಂದ ಮತ್ತು ಕಲಿಯುತ್ತಿರುವವರಿಂದ ಅದರ ಗುಣದೋಷಗಳ ಬಗ್ಗೆ ಅಭಿಪ್ರಾಯ ಸಲಹೆಗಳನ್ನು ಸಂಗ್ರಹಿಸಿ, ಅನಂತರ ಅವುಗಳನ್ನೆಲ್ಲ ವಿಶ್ವವಿದ್ಯಾಲಯದ ಗಣಕಯಂತ್ರದಲ್ಲಿ ವಿಶ್ಲೇಷಿಸಲಾಯಿತು; ಮತ್ತೆ ಮತ್ತೆ ಕ್ಷೇತ್ರಗಳಿಗೆ ಹೋಗಿ, ಕ್ಷೇತ್ರ ಸಹಾಯಕರು ನೀಡಿದ್ದ ಮಾಹಿತಿಗಳನ್ನೆಲ್ಲ ಮರು ಪರಿಶೀಲನೆ ಮಾಡಿ, ನಂತರ ನವಸಾಕ್ಷರರ ಅಪೇಕ್ಷೆಗೆ ಅನುಗುಣವಾಗಿ ವಿಷಯದ ಆದ್ಯತೆಗಳನ್ನು ನಿರ್ಧರಿಸಿಕೊಂಡು ಪುಸ್ತಕ ರಚನೆಗೆ ತೊಡಗಲಾಯಿತು; ಪ್ರಖ್ಯಾತ ಲೇಖಕರು ನಮ್ಮ ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಜೊತೆ ಚರ್ಚಿಸಿ ತಮ್ಮ ಹಸ್ತಪ್ರತಿಗಳಿಗೆ ಅಂತಿಮ ರೂಪ ಕೊಟ್ಟರು. ಕಲಾವಿದರು ವಿಷಯಗಳಿಗೊಪ್ಪುವ ಚಿತ್ರಗಳನ್ನು ಬರೆದುಕೊಟ್ಟರು. ಹೀಗೆ ಸಿದ್ಧಗೊಂಡ ಹಸ್ತಪ್ರತಿಗಳನ್ನು ನವಸಾಕ್ಷರರ ಬಳಿ ಕೊಂಡೊಯ್ದು ಅವರ ಮುಂದೆ ಪಠಿಸಿ ನಂತರ ಅವರ ಅಭಿಪ್ರಾಯ, ಪ್ರತಿಕ್ರಿಯೆಗಳನ್ನು ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿ ಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು